# ಬಟಾಲವಿ ಮತ್ತು ಚಕ್ಡಾಲವಿ ಮಧ್ಯೆ ನಡೆದ ವಾದ ವಿವಾದದ ಅವಲೋಕನ

---

ಗ್ರಂಥಕರ್ತ:
ಹಜ಼್ರತ್ ಮಿರ್ಜ಼ಾ ಗ಼ುಲಾಂ ಅಹ್ಮದ್(ಅ)

ಪ್ರಕಾಶಕರು:
ನಝ಼ಾರತ್ ನಶ್ರೋ ಇಶಾಅತ್
ಭಾರತ

# ಬಟಾಲವಿ ಮತ್ತು ಚಕ್ಡಾಲವಿ ಮಧ್ಯೆ ನಡೆದ ವಾದ ವಿವಾದದ ಅವಲೋಕನ

(ರಿವ್ಯೂಬರ್ ಮುಬಾಹಿಸ ಬಟಾಲವಿ ವ ಚಕ್ಡಾಲವಿ)

*


ಗ್ರಂಥಕರ್ತ:

**ಹಝ್‌ರತ್ ಮಿರ್ಝಾ ಗ್ಹುಲಾಂ ಅಹ್ಮದ್**(ಅ)


*


ಅನುವಾದಕ:

**ಯಂ. ಉಬೈದುಲ್ಲಾ**


*


ಪ್ರಕಾಶಕರು:

**ನಝ್ಝಾರತ್ ನಶ್‌ರೊ ಇಶಾಅತ್,**

ಭಾರತ

# Batalvi matthu Chakadalvi madhya nadedha vaada vivaadhadha avalokana

Kannada rendering of Urdu work:

ریویو بر مباحثہ بٹالوی و چکڑالوی

*"Review Mubahisa Batalvi wa Chakdalvi"*


Author : Hazrat Mirza Ghulam Ahmad[(a)]

Translated by : M. Ubeidullah, M.A., L.L.B.

Reviewed by : Muhammad Yusuf, Mangalore.,
Moulavi Inamullah Mangaluru.,
Zafar Ahmad, Mangalore.

Typing & Setting U. Basheer Ahmad, Manjeshwar .,
Inamullah Mangaluru.

Published by : Nazarat Nashro - Isha'at, Qadian,
Distt. Gurdaspur, Punjab -143516

First Edition : 2023

Copies : 500

Printed at : Fazl-e-Umar Printing Press, Qadian



**ಹಝ಼್‌ರತ್ ಮಿರ್ಝ಼ಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮ್**

**ವಾಗ್ದತ್ತ ಮಹ್‌ದೀ ಮತ್ತು ಮಸೀಹ್**

## ಹಝ್ರತ್ ಮಿರ್ಝಾ ಗ್ಯುಲಾಂ ಅಹ್ಮದ್[ಅ]

ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯಾಗಿ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಹಝ್ರತ್ ಮಿರ್ಝಾ ಗ್ಯುಲಾಂ ಅಹ್ಮದ್ ಅಲೈಹಿಸ್ಸಲಾಮ್ ಕ್ರಿಸ್ತಶಕ 1835ರಲ್ಲಿ ಭಾರತದ ಪಂಜಾಬಿನ ಒಂದು ಗ್ರಾಮವಾದ ಖಾದಿಯಾನಿನಲ್ಲಿ ಜನಿಸಿದರು. ಅವರು ಆರಂಭ ಕಾಲದಿಂದಲೇ ಅಲ್ಲಾಹನ ಆರಾಧನೆ, ಪ್ರಾರ್ಥನೆಗಳಲ್ಲೂ ಪವಿತ್ರ ಖುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿಯೂ ಮಗ್ನರಾಗಿದ್ದರು. ಆ ಕಾಲದಲ್ಲಿ ಇಸ್ಲಾಮ್ ಧರ್ಮ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣಗಳಿಗೆ ಗುರಿಯಾಗಿತ್ತು. ಇಸ್ಲಾಮ್ ಧರ್ಮದ ಶೋಚನೀಯ ಸ್ಥಿತಿಯನ್ನು ಕಂಡು ಅವರಿಗೆ ತೀವ್ರವಾಗಿ ದುಃಖವಾಗುತ್ತಿತ್ತು. ಇಸ್ಲಾಮ್ ಧರ್ಮದ ವಿರುದ್ಧ ಅನ್ಯ ಧರ್ಮದವರ ಆಕ್ರಮಣಗಳನ್ನು ಪ್ರತಿರೋಧಿಸಲು ಮತ್ತು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅವುಗಳ ವಾಸ್ತವಿಕ ರೂಪದಲ್ಲಿ ಲೋಕದ ಮುಂದೆ ಪ್ರಕಟಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 90ಕ್ಕಿಂತ ಹೆಚ್ಚು ಗ್ರಂಥಗಳನ್ನು ಮತ್ತು ಸಾವಿರಾರು ಪತ್ರಗಳನ್ನು ಬರೆದರು ಹಾಗು ಅನೇಕ ಧಾರ್ಮಿಕ ಸಂವಾದಗಳಲ್ಲಿ ಅನ್ಯಧರ್ಮದವರನ್ನು ಎದುರಿಸಿದರು. ಸೃಷ್ಟಿಕರ್ತನಾದ ಅಲ್ಲಾಹನೊಂದಿಗೆ ಸಂಬಂಧವನ್ನು ಮನುಷ್ಯರಿಗೆ ದೊರಕಿಸಿಕೊಡಬಲ್ಲ ಜೀವಂತ ಧರ್ಮ ಇಸ್ಲಾಮ್ ಎಂದೂ ಆ ಧರ್ಮವನ್ನು ಅನುಸರಿಸುವ ಮೂಲಕ ಮನುಷ್ಯನಿಗೆ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆ ಲಭಿಸುವುದು ಎಂದೂ ಅವರು ಪ್ರತಿಪಾದಿಸಿದರು.

ಅವರಿಗೆ ಚಿಕ್ಕ ವಯಸ್ಸಿನಿಂದಲೇ ಸತ್ಯ ಸ್ವಪ್ನಗಳ, ದಿವ್ಯದರ್ಶನಗಳ ಮತ್ತು ದೈವಿಕ ಸಂಬೋಧನೆಗಳ ಭಾಗ್ಯ ಲಭಿಸಿತ್ತು. 1889ರಲ್ಲಿ ದೈವಿಕ ನಿರ್ದೇಶನದ ಪ್ರಕಾರ ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಪರಿಶುದ್ಧ ಜಮಾಅತನ್ನು ಸ್ಥಾಪಿಸಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲು ಪ್ರಾರಂಭಿಸಿದರು. ದಿನ ಕಳೆದಂತೆ ಅವರಿಗೆ ದೈವಿಕ ಸಂಬೋಧನೆಗಳು ಸಹ ವರ್ಧಿಸುತ್ತಾ ಇದ್ದುವು. ಲೋಕದ ವಿವಿಧ ಧರ್ಮಗಳಲ್ಲಿ ವಿವಿಧ ಹೆಸರುಗಳಲ್ಲಿ ಭವಿಷ್ಯ ನುಡಿಯಲಾದ ಅಂತಿಮ ಕಾಲಘಟ್ಟದ ಧರ್ಮಸುಧಾರಕ ನಾನೇ ಆಗಿರುವೆನು ಎಂದು ಅವರು ದೇವಾಜ್ಞೆ ಪ್ರಕಾರ ಘೋಷಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಲೋಕದ ಅಂತಿಮ ಕಾಲಘಟ್ಟದಲ್ಲಿ ಆಗಮಿಸುವರೆಂದು ಶುಭವಾರ್ತೆ ನೀಡಿದ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಸಹ ತಾನೆಂದು ಅವರು ವಾದಿಸಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ ಲೋಕದ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

1908ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಪವಿತ್ರ ಖುರ್‌ಆನಿನ ಆದೇಶಗಳ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳ ಪ್ರಕಾರ ಅವರ ಆಗಮನೋದ್ದೇಶವನ್ನು ಪರಿಪೂರ್ಣವಾಗಿ ಈಡೇರಿಸಲು ಖಿಲಾಫತ್ ವ್ಯವಸ್ಥೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನಲ್ಲಿ ಸ್ಥಾಪಿಸಲ್ಪಟ್ಟಿತು. ಈಗ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್[ಅಯ್ಯದಹುಲ್ಲಾಹ್] ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಐದನೇ ಖಲೀಫರಾಗಿರುವರು.

# ಪ್ರಕಾಶಕರ ನುಡಿ

1902ರ ನವೆಂಬರ್‌ನಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸಿನ ಪ್ರಾಮುಖ್ಯತೆ ಮತ್ತು ಸ್ಥಾನಮಾನದ ಕುರಿತು ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿ ಮತ್ತು ಮೌಲವಿ ಅಬ್ದುಲ್ಲಾಹ್ ಚಕ್‌ಡಾಲವಿ ನಡುವೆ ಚರ್ಚೆ ನಡೆದಿತ್ತು. ಹದೀಸನ್ನು ಪವಿತ್ರ ಖುರ್‌ಆನಿನ ಮೇಲೆ ತೀರ್ಪುಗಾರನಾಗಿ ಮಾಡಬೇಕು ಮತ್ತು ಅದರ ಬೆಳಕಿನಲ್ಲೇ ಪವಿತ್ರ ಖುರ್‌ಆನನ್ನು ಅಧ್ಯಯನ ಮಾಡಬೇಕು ಎಂದು ಅಹ್ಲೇ ಹದೀಸ್ ಪಂಥಕ್ಕೆ ಸೇರಿದವರಾದ ಮೌಲವಿ ಮುಹಮ್ಮದ್ ಹುಸೇನ್ ವಾದಿಸುತ್ತಾರೆ. ಮತ್ತೊಂದೆಡೆ, ಹದೀಸುಗಳು ವ್ಯರ್ಥವೂ ಅರ್ಥಹೀನವೂ ವಿಶ್ವಾಸಾರ್ಹವಲ್ಲದವುಗಳೂ ಆಗಿವೆ ಎಂದು ಅಹ್ಲೇ ಖುರ್‌ಆನ್ ಪಂಥದ ಪ್ರತಿಪಾದಕ ಮೌಲವಿ ಅಬ್ದುಲ್ಲಾಹ್ ವಾದಿಸುತ್ತಾರೆ. ಒಂದನೇ ಪಕ್ಷ ಹದೀಸುಗಳಿಗೆ ನೀಡಬೇಕಾದ ಸ್ಥಾನದಲ್ಲಿ ಮಿತಿಯನ್ನು ಮೀರಿದರೆ, ಎರಡನೆಯ ಪಕ್ಷ ಹದೀಸುಗಳಿಗೆ ಕನಿಷ್ಠವಾದ ಬೆಲೆಯನ್ನು ಕೂಡ ನೀಡುತ್ತಿಲ್ಲ.

ಈ ಎರಡೂ ತೀವ್ರ ಮತ್ತು ದೋಷಪೂರಿತ ವೀಕ್ಷಣೆಗಳ ತುಲನಾತ್ಮಕ ವಿಶ್ಲೇಷಣೆ ನಡೆಸಿಕೊಂಡು ಸಮಗ್ರ ಮತ್ತು ತರ್ಕಬದ್ಧ ದೃಷ್ಟಿಕೋನವನ್ನು ಹಝ್ರತ್ ಮಸೀಹ್ ಮೌಊದ್(ಅ) ಈ ಕಿರುಹೊತ್ತಿಗೆಯಲ್ಲಿ ಪ್ರಸ್ತುತಪಡಿಸಿರುವರು. ಪವಿತ್ರ ಖುರ್‌ಆನ್ ಮತ್ತು ಸುನ್ನತಿಗೆ (ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೃತಿ ರೂಪದಲ್ಲಿ ತೋರಿಸಿದ ನಡೆವಳಿಕೆ) ಹದೀಸಿನ ಮೇಲೆ ಆದ್ಯತೆ ನೀಡಬೇಕೆಂದೂ ಇವರೆಡಕ್ಕೂ ವಿರುದ್ಧವಾಗಿರದ ಹದೀಸುಗಳನ್ನು ಅಂಗೀಕರಿಸಬೇಕೆಂದೂ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

ಪವಿತ್ರ ಖುರ್‌ಆನ್, ಸುನ್ನತ್ ಮತ್ತು ಹದೀಸುಗಳ ಸರಿಯಾದ ಪದವಿ ಏನೆಂದು ಈ ಉಪಯುಕ್ತ ಕೃತಿಯ ಅಧ್ಯಯನದಿಂದ ಓದುಗರಿಗೆ ಮನವರಿಕೆಯಾಗುವಂತೆ ಅಲ್ಲಾಹನು ಮಾಡಲಿ. ಆಮೀನ್.

بِسۡمِ اللّٰہِ الرَّحۡمٰنِ الرَّحِیۡمِ

نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

## ಮೌಲವಿ ಅಬೂ ಸಈದ್ ಮುಹಮ್ಮದ್ ಹುಸೈನ್ ಬಟಾಲವಿ ಸಾಹಿಬ್ ಮತ್ತು ಮೌಲವಿ ಅಬ್ದುಲ್ಲಾಹ್ ಚಕ್‌ಡಾಲವಿ ಸಾಹಿಬ್ ಮಧ್ಯೆ ನಡೆದ ವಾದವಿವಾದದ ಬಗ್ಗೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್[ಅ] (ವಾಗ್ದತ್ತ ಮಹ್‌ದೀ ಮತ್ತು ಮಸೀಹ್) ಮಾಡಿದ ಅವಲೋಕನ ಮತ್ತು ತನ್ನ ಜಮಾಅತಿಗೆ ನೀಡಿದ ಉಪದೇಶ.

ಎರಡು ಪಕ್ಷಗಳ ಲೇಖನಗಳಿಂದ ತಿಳಿಯುವುದೇನೆಂದರೆ, ವಾದವಿವಾದ ಪ್ರಾರಂಭವಾಗಲು ಕಾರಣ, ಒಂದೆಡೆ ಮೌಲವಿ ಅಬ್ದುಲ್ಲಾಹ್ ಸಾಹಿಬರು ಹಝ್ರತ್ ಪೈಗಂಬರರ[ಸ] ಹದೀಸುಗಳನ್ನು ಪೂರ್ಣವಾಗಿ ನಿರಾಕರಿಸಿಕೊಂಡು ಅವುಗಳ ಬಗ್ಗೆ ಎಂತಹ ಮಾತುಗಳನ್ನು ಹೇಳುತ್ತಾರೆಂದರೆ ಅವುಗಳನ್ನು ಪ್ರಸ್ತಾಪಿಸುವುದು ಕೂಡ ಅಗೌರವವಾಗಿದೆ. ಮತ್ತೊಂದೆಡೆ ಮೌಲವಿ ಮುಹಮ್ಮದ್ ಹುಸೈನ್ ಸಾಹಿಬ್ ಅವರಿಗೆದುರಾಗಿ ಮುಂದಿರಿಸುವ ಸಾಕ್ಷ್ಯಾಧಾರವೇನೆಂದರೆ, ಹದೀಸುಗಳು ಮೌಲವಿ ಅಬ್ದುಲ್ಲಾಹ್ ಸಾಹಿಬ್ ಹೇಳುವ ಹಾಗೆ ವ್ಯರ್ಥವೂ ಅರ್ಥಹೀನವೂ ವಿಶ್ವಾಸಾರ್ಹವಲ್ಲದವುಗಳೂ ಆಗಿದ್ದರೆ ಆರಾಧನೆಗಳ ಮತ್ತು ಕರ್ಮಶಾಸ್ತ್ರ ವಿಷಯಗಳ ಬಹುತೇಕ ಭಾಗ ನಿರಾಧಾರ ಮತ್ತು ನಿರುಪಯುಕ್ತವಾಗುವುವು. ಏಕೆಂದರೆ ಪವಿತ್ರ ಖುರ್‌ಆನಿನ ಆಜ್ಞೆಗಳ ವಿವರಣೆಗಳು ಹದೀಸುಗಳ ಮೂಲಕವೇ ದೊರೆಯುತ್ತವೆ. ಪವಿತ್ರ ಖುರ್‌ಆನ್ ಮಾತ್ರ ಸಾಕಾಗಿದ್ದರೆ ಬೆಳಿಗ್ಗಿನ ಕಡ್ಡಾಯ ನಮಾಝ಼್ ಆದ ಫಜ್ರ್ ಎರಡು ರಕಅತ್, ಮಗ್‌ರಿಬ್ ಮೂರು ರಕಅತ್, ಉಳಿದ ಮೂರು ನಮಾಝ಼್ ನಾಲ್ಕು ರಕಅತ್ ಎಂಬುದಕ್ಕೆ ಪುರಾವೆ ಏನಿದೆ? ಈ ಪ್ರಶ್ನೆಯಲ್ಲಿ ಒಂದು ತಪ್ಪು ಅಡಕವಾಗಿದ್ದರೂ ಇದು ಬಹಳ ಬಲವತ್ತಾದ ತಿರುಗೇಟು ಆದ ಕಾರಣ ಇದಕ್ಕೆ ಮೌಲವಿ ಅಬ್ದುಲ್ಲಾಹ್ ಸಾಹಿಬ್ ಸಮಂಜಸವಾದ ಉತ್ತರ ನೀಡಲಿಲ್ಲ. ಬದಲಾಗಿ ಅವರು ಕೇವಲ ನಿರರ್ಥಕ ಮಾತುಗಳನ್ನು ಹೇಳಿರುವರು. ಅವುಗಳು ಇಲ್ಲಿ ಬರೆಯುವುದಕ್ಕೂ

ಯೋಗ್ಯವಲ್ಲ. ಬಟಾಲವಿ ಸಾಹಿಬರು ಮುಂದಿರಿಸಿದ ಆಕ್ಷೇಪದಿಂದ ಕೊನೆಗೆ ಉಂಟಾದ ಪರಿಣಾಮ ಏನೆಂದರೆ ಮೌಲವಿ ಅಬ್ದುಲ್ಲಾಹ್ ಸಾಹಿಬ್ ಒಂದು ಹೊಸ ನಮಾಝ಼ನ್ನು ರೂಪಿಸಿದರು. ಅಂತಹ ನಮಾಝ಼ಿನ ಕುರುಹು ಕೂಡ ಯಾವುದೇ ಇಸ್ಲಾಮೀ ಪಂಗಡಗಳಲ್ಲಿ ಕಂಡು ಬರುವುದಿಲ್ಲ. ಅವರು ಅತ್ತಹಿಯ್ಯಾತನ್ನು, ದುರೂದನ್ನು ಮತ್ತು ನಮಾಝ಼ಿನಲ್ಲಿ ಪಠಿಸಲಾಗುವ ಇತರ ಪ್ರಾರ್ಥನೆಗಳನ್ನು ನಮಾಝ಼ಿನಿಂದ ತೆಗೆದು ಹಾಕಿಕೊಂಡು ಅವುಗಳ ಸ್ಥಾನದಲ್ಲಿ ಪವಿತ್ರ ಖುರ್‌ಆನಿನ ವಚನಗಳನ್ನು ಮಾತ್ರ ಇರಿಸಿರುವರು. ಅದಲ್ಲದೇ ಅವರು ನಮಾಝ಼್ ಅನುಷ್ಠಾನ ಕ್ರಮದಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಿರುವರು. ಇಲ್ಲಿ ಅವುಗಳ ಬಗ್ಗೆ ಪ್ರಸ್ತಾಪಿಸುವ ಅಗತ್ಯವಿಲ್ಲ. ಬಹುಶಃ ಹಜ್ಜ್, ಝ಼ಕಾತ್ ಮೊದಲಾದವುಗಳಿಗೆ ಸಂಬಂಧಿಸಿಯೂ ಅವರು ಬದಲಾವಣೆ ಮಾಡಿರಬಹುದು. ಆದರೆ ಮೌಲವಿ ಅಬ್ದುಲ್ಲಾಹ್ ಸಾಹಿಬರು ಭಾವಿಸುವ ಹಾಗೆ ಹದೀಸುಗಳು ನಿರುಪಯುಕ್ತವೂ ಅರ್ಥಹೀನವೂ ಆಗಿವೆಯೋ? ಖಂಡಿತವಾಗಿಯೂ ಅಲ್ಲ. (ಮಆಧ಼ಲ್ಲಾಹ್.)

ಸತ್ಯದಲ್ಲಿ ಈ ಎರಡು ಪಕ್ಷಗಳೂ ವಿರುದ್ಧ ದಿಕ್ಕಿನಲ್ಲಿ ತಮ್ಮ ಎಲ್ಲೆಗಳನ್ನು ಮೀರಿವೆ. (ಒಂದನೇ ಪಕ್ಷ ಹದೀಸುಗಳಿಗೆ ನೀಡಬೇಕಾದ ಸ್ಥಾನದಲ್ಲಿ ಮಿತಿಯನ್ನು ಮೀರಿದರೆ, ಎರಡನೆಯ ಪಕ್ಷ ಹದೀಸುಗಳಿಗೆ ಕನಿಷ್ಠವಾದ ಬೆಲೆಯನ್ನು ಕೂಡ ನೀಡುತ್ತಿಲ್ಲ – ಅನುವಾದಕ). ಹಝ಼್ರತ್ ಪೈಗಂಬರರ[ಸ] ತನಕ ವರದಿಗಾರರ ಸರಪಳಿ ತಲಪುವ ಹದೀಸುಗಳನ್ನು ನಿರುಪಯುಕ್ತ ಮತ್ತು ವ್ಯರ್ಥವಾದದ್ದು ಎಂದು ಗಣಿಸಬಾರದು ಎಂದು ಮೊದಲನೆಯ ಪಕ್ಷ ಎಂದರೆ ಮೌಲವಿ ಮುಹಮ್ಮದ್ ಹುಸೇನ್ ಸಾಹಿಬ್ ಹೇಳಿದ್ದು ಸರಿಯೇ ಆಗಿದೆ. ಆದರೆ ಪ್ರತಿಯೊಂದಕ್ಕೂ ನೀಡಬೇಕಾದ ಸ್ಥಾನಕ್ಕೆ ಸಂಬಂಧಿಸಿದ ನಿಯಮಗಳನ್ನು ಮರೆತುಬಿಟ್ಟು ಅವರು ಹದೀಸುಗಳಿಗೆ ಎಂತಹ ಉನ್ನತ ಸ್ಥಾನ ನೀಡುತ್ತಾರೆಂದರೆ, ಅದರಿಂದ ಪವಿತ್ರ ಖುರ್‌ಆನನ್ನು ಅನಿವಾರ್ಯವಾಗಿಯೂ ಅಪಮಾನಿಸಿದಂತೆ ಆಗುತ್ತದೆ ಮತ್ತು ಅದನ್ನು ನಿರಾಕರಿಸಬೇಕಾಗುತ್ತದೆ. ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನಿಗೆ ವಿರುದ್ಧವಾಗಿ ಮತ್ತು ಎದುರಾಗಿ ನಿಲ್ಲುವುದರ ಬಗ್ಗೆ ಅವರಿಗೆ ಕಿಂಚಿತ್ತೂ ಚಿಂತೆಯಿಲ್ಲ. ಅವರು ಹದೀಸುಗಳಲ್ಲಿರುವ ಕಥೆಗಳಿಗೆ ಪವಿತ್ರ ಖುರ್‌ಆನಿನಲ್ಲಿ ವಿವರಿಸಲಾಗಿರುವ ಕಥೆಗಳಿಗಿಂತ ಪ್ರಾಮುಖ್ಯತೆ ನೀಡುತ್ತಾರೆ. ಹದೀಸುಗಳಲ್ಲಿರುವ ವಿಷಯಗಳಿಗೆ ಪವಿತ್ರ ಖುರ್‌ಆನಿನಲ್ಲಿ ವಿವರಿಸಿದ ವಿಷಯಗಳ ಮೇಲೆ ಯಾವಾಗಲೂ ಆದ್ಯತೆ ನೀಡುತ್ತಾರೆ. ಹೀಗೆ ಮಾಡುವುದು ಸ್ಪಷ್ಟವಾದ ತಪ್ಪು

ಮತ್ತು ನ್ಯಾಯ ಮಾರ್ಗದಿಂದ ದೂರ ಸರಿಯುವಿಕೆಯಾಗಿದೆ.

فَبِاَيِّ حَدِيْثٍۢ بَعْدَ اللّٰهِ وَاٰيٰتِهٖ يُؤْمِنُوْنَ○

**"ಫಬಿ ಅಯ್ಯಿ ಹದೀಸಿನ್ ಬಅ್‌ದಲ್ಲಾಹಿ ವ ಆಯಾತಿಹೀ ಯುಅ್‌ಮಿನೂನ್"** ಎಂದು ವೈಭವಶಾಲಿಯಾದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿರುವನು. ಎಂದರೆ, ಅಲ್ಲಾಹನ ವಚನಗಳನ್ನಲ್ಲದೇ ಬೇರೆ ಯಾವ ಮಾತನ್ನು ಅವರು ನಂಬುವರು? (45:7). ಈ ವಚನದಲ್ಲಿ ಹದೀಸು (ಮಾತು) ಎಂದು ಸಾಮಾನ್ಯವಾಗಿ ಬಳಸಲಾದ ಪದದಿಂದ ಸ್ಪಷ್ಟವಾಗುವುದೇನೆಂದರೆ, ಪವಿತ್ರ ಖುರ್‌ಆನಿಗೆ ವಿರುದ್ಧವಾಗಿರುವ ಮತ್ತು ಅದರೊಂದಿಗೆ ಸಮನ್ವಯಗೊಳಿಸಲು ಸಾಧ್ಯವಿಲ್ಲದ ಹದೀಸುಗಳನ್ನು ತಿರಸ್ಕರಿಸಲ್ಪಡಬೇಕಾಗಿದೆ. ಈ ವಚನದಲ್ಲಿ ಬಳಸಲಾದ ಹದೀಸು ಎಂಬ ಪದದಲ್ಲಿ ಒಂದು ಭವಿಷ್ಯವಾಣಿ ಸಹ ಇದೆ. ಅದು ಪವಿತ್ರ ಖುರ್‌ಆನಿನ ವಚನದಲ್ಲಿ ಸೂಚನೆಯ ರೂಪದಲ್ಲಿ ಅಡಕವಾಗಿದೆ. ಅದೇನೆಂದರೆ, ಕೆಲವು ಜನರು ಪವಿತ್ರ ಖುರ್‌ಆನನ್ನು ಬಿಟ್ಟುಕೊಂಡು, ಅದರಲ್ಲಿ ವಿವರಿಸಲಾಗಿರುವ ವಿಷಯಗಳಿಗೆ ವಿರುದ್ಧವಾಗಿರುವ ಹದೀಸುಗಳನ್ನು ಅನುಸರಿಸುವ ಒಂದು ಕಾಲ ಈ ಸಮುದಾಯದಲ್ಲಿ ಬರುವುದು ಎಂದು ಸರ್ವಶಕ್ತನಾದ ಅಲ್ಲಾಹನು ಈ ವಚನದಲ್ಲಿ ಸೂಚಿಸಿರುವನು. ಒಟ್ಟಾರೆ ಹೇಳುವುದಾದರೆ, ಅಹ್ಲೆ ಹದೀಸ್ ಎಂಬ ಪಂಗಡ ಈ ವಿಷಯದಲ್ಲಿ ಮಿತಿಯನ್ನು ಮೀರಿದೆ. ಅವರು ಪವಿತ್ರ ಖುರ್‌ಆನ್ ನೀಡುವ ಸಾಕ್ಷ್ಯಗಳ ಮೇಲೆ ಹದೀಸ್ ವಿವರಣೆಗೆ ಆದ್ಯತೆ ನೀಡುತ್ತಾರೆ. ಅವರಿಗೆ ನ್ಯಾಯ ಮತ್ತು ದೇವಭಯವಿರುತ್ತಿದ್ದರೆ ಅಂತಹ ಹದೀಸುಗಳನ್ನು ಪವಿತ್ರ ಖುರ್‌ಆನಿನೊಂದಿಗೆ ಹೋಲಿಸಿ ಸಮನ್ವಯಗೊಳಿಸಬಹುದಾಗಿತ್ತು. ಆದರೆ ಅವರು ಅಲ್ಲಾಹನ ಖಚಿತ ಮತ್ತು ನಿಖರವಾದ ವಚನಗಳನ್ನು ಬಿಸಾಕಲು ಮತು ತ್ಯಜಿಸಲು ಇಷ್ಟಪಟ್ಟರು. ಆದರೆ ಅಲ್ಲಾಹನ ಗ್ರಂಥಕ್ಕೆ ವಿರುದ್ಧವಾದ ಹದೀಸುಗಳನ್ನು ಬಿಡಲು ಅಥವಾ ಪವಿತ್ರ ಖುರ್‌ಆನಿಗೆ ಅನುಯೋಜ್ಯವಾದ ರೀತಿಯಲ್ಲಿ ಅವುಗಳನ್ನು ವಿವರಿಸಲು ಅವರು ತಯಾರಾಗಲಿಲ್ಲ. ಈ ಮಿತಿಮೀರಿದ ಮಾರ್ಗವನ್ನು ಮೌಲವಿ ಮುಹಮ್ಮದ್ ಹುಸೇನ್ ಸಾಹಿಬ್ ಅವಲಂಬಿಸಿರುವರು.

ಇದಕ್ಕೆ ವಿರುದ್ಧವಾಗಿ ಮೌಲವಿ ಅಬ್ದುಲ್ಲಾಹ್ ಸಾಹಿಬ್ ಉಪೇಕ್ಷೆಯ ಮಾರ್ಗ ಅವಲಂಬಿಸಿದ್ದಾರೆ. ಅವರು ಪೂರ್ಣವಾಗಿಯೂ ಹದೀಸುಗಳನ್ನು ತಿರಸ್ಕರಿಸಿದ್ದಾರೆ. ಆದರೆ ಹದೀಸುಗಳನ್ನು ನಿರಾಕರಿಸುವುದು ಒಂದು ರೀತಿಯಲ್ಲಿ ಪವಿತ್ರ ಖುರ್‌ಆನನ್ನು

ನಿರಾಕರಿಸಿದಂತೆ ಆಗಿದೆ. ಏಕೆಂದರೆ **'ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್'** ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ. ಎಂದರೆ, ಹೇಳು; ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. (3:32)

ಅಲ್ಲಾಹನನ್ನು ಪ್ರೀತಿಸುವುದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರೊಂದಿಗೆ ಹೊಂದಿಕೊಂಡಿರುವುದರಿಂದ ಅವರ ನಡೆವಳಿಕೆಗಳ ಉದಾಹರಣೆಗಳನ್ನು ಹುಡುಕುವುದಕ್ಕೆ ಹದೀಸು ಸಹ ಒಂದು ಮಾರ್ಗವಾಗಿದೆ. ಆದುದರಿಂದ ಹದೀಸನ್ನು ಬಿಟ್ಟು ಬಿಡುವವನು ಅನುಸರಣೆಯ ವಿಧಾನವನ್ನೂ ಬಿಟ್ಟುಬಿಡುತ್ತಾನೆ. ಮೌಲವಿ ಅಬ್ದುಲ್ಲಾಹ್ ಸಾಹಿಬ್ ಹೇಳಿದ "ಎಲ್ಲ ಹದೀಸುಗಳು ಕೇವಲ ಸಂಶಯಗಳ ಭಂಡಾರವಾಗಿದೆ" ಎಂಬ ಮಾತು ಅವರು ಸಾಕಷ್ಟು ಚಿಂತಿಸದ ಕಾರಣದಿಂದ ಹೇಳಿದ್ದಾಗಿದೆ. ಈ ಯೋಚನೆಯ ಮೂಲ ಬೇರು ಮುಹದ್ದಿಸರು (ಹದೀಸ್ ಪಂಡಿತರು) ಹದೀಸುಗಳಿಗೆ ಸಂಬಂಧಿಸಿ ಮಾಡಿದ ತಪ್ಪಾದ ಮತ್ತು ಅಪೂರ್ಣವಾದ ಒಂದು ವಿಂಗಡಣೆಯಾಗಿದೆ. ಆ ಕಾರಣದಿಂದ ಬಹಳ ಜನರಿಗೆ ತಪ್ಪುಗ್ರಹಿಕೆಯಾಗಿದೆ. ಮುಹದ್ದಿಸರು ಹೇಳುತ್ತಾರೆ: ನಮ್ಮ ಬಳಿ ಅಲ್ಲಾಹನ ಗ್ರಂಥ ಮತ್ತು ಹದೀಸುಗಳಿವೆ. ಹದೀಸ್ ಅಲ್ಲಾಹನ ಗ್ರಂಥದ ಮೇಲೆ ಖಾಝಿ (ನ್ಯಾಯಾಧೀಶ) ಆಗಿದೆ. ಅವರು ಹೇಳುವ ಪ್ರಕಾರ ಹದೀಸ್ ಒಬ್ಬ ನ್ಯಾಯಾಧೀಶನ ಹಾಗೆ ಕುರ್ಚಿಯಲ್ಲಿ ಕುಳಿತಿದೆ. ಪವಿತ್ರ ಖುರ್‌ಆನ್ ಅದರೆದುರಿಗೆ ದೂರು ಸಲ್ಲಿಸುವವನ ಹಾಗೆ ನಿಂತಿದೆ ಮತ್ತು ಅದು ಹದೀಸಿನ ಆಜ್ಞೆಗೆ ಅಧೀನವಾಗಿದೆ.

ಇಂತಹ ಮಾತುಗಳಿಂದ ಪ್ರತಿಯೊಬ್ಬರಿಗೂ ಸಂಶಯ ಬರುವುದು. ಏಕೆಂದರೆ, ಹದೀಸುಗಳು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಿಂದ ನೂರು ನೂರೈವತ್ತು ವರ್ಷಗಳ ನಂತರ ಜಮಾಯಿಸಲ್ಪಟ್ಟಿವೆ. ಅದು ಮನುಷ್ಯರ ಹಸ್ತಕ್ಷೇಪದಿಂದ ಮುಕ್ತವಲ್ಲ. ಮಾತ್ರವಲ್ಲ, ಅವುಗಳು ಸಂಶಯಗಳ ಸಂಗ್ರಹವಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತನಕ ವರದಿಗಾರರ ಸರಪಳಿ ತಲಪುವ ಹದೀಸುಗಳು ಬಹಳ ಕಮ್ಮಿ. ಇಂತಹ ರೀತಿಯಲ್ಲಿರುವ ಹದೀಸ್ ಪವಿತ್ರ ಖುರ್‌ಆನಿನ ಮೇಲೆ ನ್ಯಾಯಾಧೀಶನಾಗಿದೆ ಎಂದು ಹೇಳುವುದಾದರೆ ಅದರ ಅರ್ಥ ಇಸ್ಲಾಮ್ ಧರ್ಮ ಪೂರ್ಣವಾಗಿ ಸಂಶಯಗಳ ಒಂದು ರಾಶಿಯಾಗಿದೆ ಎಂಬಂತಾಯಿತು. ಸಂಶಯಕರವಾದ ಸಂಗತಿಗೆ ಯಾವುದೇ ಬೆಲೆಯಿಲ್ಲ ಎಂಬುದು

ಸ್ಪಷ್ಟ. ಆದುದರಿಂದ ಯಾರು ಸಂಶಯವನ್ನು ಅವಲಂಬಿಸುತ್ತಾನೋ ಅವನು ಸತ್ಯದ ಉನ್ನತಿಯಿಂದ ಬಹಳ ಕೆಳಗೆ ಬಿದ್ದಿರುವವನು ಆಗಿರುತ್ತಾನೆ. **'ಇನ್ನಝ್ಝನ್ನ ಲಾ ಯುಗ್‌ನೀ ಮಿನಲ್ ಹಖ್ಖಿ ಶೈಅನ್'** ಎಂದು ಅಲ್ಲಾಹನು ಹೇಳಿದ್ದಾನೆ. ಎಂದರೆ, ಖಂಡಿತವಾಗಿಯೂ ಊಹೆ ಅಥವಾ ಸಂಶಯಕ್ಕೆ ಖಚಿತವಾದ ಸತ್ಯದ ಮುಂದೆ ಯಾವುದೇ ಬೆಲೆಯಿಲ್ಲ. (ಪವಿತ್ರ ಖುರ್‌ಆನ್ – 10:37)

ಒಟ್ಟಿನಲ್ಲಿ, ಹೀಗಾದರೆ ಪವಿತ್ರ ಖುರ್‌ಆನ್ ನಮ್ಮ ಕೈಯಿಂದ ಬಿಟ್ಟು ಹೋದಂತಾಯಿತು. ಏಕೆಂದರೆ ಹದೀಸ್ ಎಂಬ ನ್ಯಾಯಾಧೀಶನ ತೀರ್ಪು ದೊರಕದಿದ್ದರೆ ಪವಿತ್ರ ಖುರ್‌ಆನನ್ನು ಅನುಸರಿಸಬೇಕಾಗಿಲ್ಲ. ಅದು ತ್ಯಜಿಸಬೇಕಾದ ಮತ್ತು ಬಿಸಾಕಬೇಕಾದ ವಸ್ತುವಾಯಿತು. ಅದೇ ವೇಳೆ ಹದೀಸ್ ಎಂಬ ನ್ಯಾಯಾಧೀಶ ಕೇವಲ ಸಂಶಯ ಎಂಬ ಕೊಳಕು ವಸ್ತ್ರ ಧರಿಸಿ ನಿಂತಿದ್ದಾನೆ. ಅದರಲ್ಲಿ ಸುಳ್ಳಿನ ಸಾಧ್ಯತೆ ಖಂಡಿತ ಇರುತ್ತದೆ. ಸುಳ್ಳಿನ ಸಾಧ್ಯತೆಯಿಂದ ಮುಕ್ತವಾಗಿರುವುದಿಲ್ಲ ಎಂಬುದೇ ಸಂಶಯದ ಅರ್ಥವಾಗಿದೆ. ಹೀಗೆ ಇಂತಹ ಸ್ಥಿತಿಯಲ್ಲಿ ನಮ್ಮ ಕೈಯಲ್ಲಿ ಪವಿತ್ರ ಖುರ್‌ಆನ್ ಕೂಡ ಇಲ್ಲದಂತಾಯಿತು ಮತ್ತು ಹದೀಸ್ ಭರವಸೆಗೆ ಯೋಗ್ಯವೂ ಅಲ್ಲ. ಹೀಗೆ ಎರಡು ಕೂಡ ಕೈಯಿಂದ ಬಿಟ್ಟು ಹೋದಂತಾಯಿತು. ಈ ತಪ್ಪು ಬಹುತೇಕ ಜನರನ್ನು ನಾಶಮಾಡಿದೆ.*

ನೇರ ಮತ್ತು ಸರಿಯಾದ ಮಾರ್ಗದ ಬಗ್ಗೆ ವಿವರಿಸಲು ನಾನು ಈ ಲೇಖನವನ್ನು ಬರೆದಿರುವೆನು. ಮುಸ್ಲಿಮರು ಇಸ್ಲಾಮೀ ಮಾರ್ಗದರ್ಶನಗಳ ಮೇಲೆ ನೆಲೆನಿಲ್ಲಲು

* ನಾನು ಪ್ರಕಟಣೆಯನ್ನು ಬರೆದು ಮುಗಿಸಿದಾಗ ಅಥವಾ ಪ್ರಾಯಶಃ ಎರಡು ಮೂರು ವಾಕ್ಯ–ಗಳು ಬರೆಯಲು ಬಾಕಿಯಾಗಿದ್ದಾಗ ನನಗೆ ನಿದ್ರೆ ಬಂತು. ನಾನು ಕೈಯಿಂದ ಕಾಗದ ಕೆಳಗಿರಿಸಿ ನಿದ್ರಿಸಲು ತೊಡಗಿದೆ. ಆಗ ಕನಸಿನಲ್ಲಿ ಮೌಲವಿ ಮುಹಮ್ಮದ್ ಹುಸೈನ್ ಸಾಹಿಬ್ ಬಟಾಲವಿ ಮತ್ತು ಮೌಲವಿ ಅಬ್ದುಲ್ಲಾಹ್ ಸಾಹಿಬ್ ಚಕ್‌ಡಾಲವಿ ನನ್ನ ಕಣ್ಣ ಮುಂದೆ ಬಂದರು. ನಾನು ಅವ–ರಿಬ್ಬರನ್ನು ಸಂಬೋಧಿಸಿ ಹೇಳಿದೆ **ಖುಸಿಫಲ್ ಖಮರು ವ ಶ್ಶಮ್ಸ್ ಫೀ ರಮಝ್ಝಾನಿ ಫಬಿ ಅಯ್ಯಿ ಆಲಾಯಿ ರಬ್ಬಿಕುಮಾ ತುಕಧ್ಧಿಬಾನಿ** – ರಮಝ್ಝಾನ್ ತಿಂಗಳಲ್ಲಿ ಚಂದ್ರಗ್ರಹಣ ಮತ್ತು ಸೂರ್ಯ–ಗ್ರಹಣಗಳು ಘಟಿಸಿವೆ. ನೀವಿಬ್ಬರೂ ಅಲ್ಲಾಹನ ಅನುಗ್ರಹವನ್ನು ಏಕೆ ಅಲ್ಲಗಳೆಯುತ್ತಿರುವಿರಿ. ಅನಂತರ ನಾನು ಕನಸಿನಲ್ಲಿ ಮೌಲವಿ ಅಬ್ದುಲ್ ಕರೀಮ್ ಸಾಹಿಬ್‌ರೊಂದಿಗೆ ಹೀಗೆ ಹೇಳಿದೆ: **ಆಲಾಯಿ** ಎಂಬ ಪದದಲ್ಲಿ ಹೇಳಿರುವುದು ನನ್ನ ಬಗ್ಗೆಯಾಗಿದೆ. ಅನಂತರ ನಾನೊಂದು ಅಂಗಳದ ಕಡೆಗೆ ನೋಡಿದೆ. ಅಲ್ಲೊಂದು ದೀಪ ಉರಿಯುತ್ತಿತ್ತು. ಅದು ರಾತ್ರಿ ಸಮಯವಾಗಿತ್ತು. ಆ ದೀಪದ ಮುಂದೆ ಪವಿತ್ರ ಖುರ್‌ಆನನ್ನು ತೆರೆದು ಅದರಿಂದ ನನಗೆ ಅವತೀರ್ಣಗೊಂಡ ಆ ಎರಡು ಅರಬಿ ವಾಕ್ಯಗಳು ಪವಿತ್ರ ಖುರ್‌ಆನಿನಲ್ಲಿ ಇವೆ ಎಂಬಂತೆ ಕೆಲವು ಜನರು ನಕಲು ಮಾಡುತ್ತಿದ್ದಾರೆ. ಅಲ್ಲಿದ್ದವರಲ್ಲಿ ಒಬ್ಬನನ್ನು ನಾನು ಗುರುತಿಸಿದೆ. ಅವರು ಅಮೃತ್‌ಸರಿನ ಮಿಯಾ ನಬಿ ಬಖ್ಷ್ ಸಾಹಿಬ್ ರಫೂಗರ್ ಆಗಿದ್ದರು.

ಮೂರು ವಿಷಯಗಳು ಆವಶ್ಯಕವಾಗಿವೆ.

ಒಂದನೆಯದು **ಪವಿತ್ರ ಖುರ್‌ಆನ್**. ಅದು ಅಲ್ಲಾಹನ ಗ್ರಂಥವಾಗಿದೆ. ಅದಕ್ಕಿಂತ ಮಿಗಿಲಾದ ಯಾವುದೇ ಖಚಿತ ಮತ್ತು ಸತ್ಯವಾದ ವಚನ ನಮ್ಮ ಬಳಿಯಿಲ್ಲ. ಅದು ಅಲ್ಲಾಹನ ವಚನವಾಗಿದೆ. ಅದು ಸಂಶಯವೆಂಬ ಮಲೀನತೆಯಿಂದ ಮುಕ್ತವಾಗಿದೆ.

ಎರಡನೆಯದು **ಸುನ್ನತ್**. ಇದಕ್ಕೆ ಸಂಬಂಧಿಸಿ ಅಹ್ಲೆ ಹದೀಸ್ ಪಂಗಡದ ಸಾಂಕೇತಿಕ ಪದಗಳಿಂದ ಬಿಟ್ಟು ನಿಂತುಕೊಂಡು ನಾವು ಮಾತನಾಡುತ್ತೇವೆ. ಎಂದರೆ, ಮುಹದ್ದಿಸರು (ಹದೀಸ್ ಪಂಡಿತರು) ಹೇಳುವ ಹಾಗೆ ಹದೀಸ್ ಮತ್ತು ಸುನ್ನತ್ ಒಂದೇ ಎಂದು ನಾವು ಹೇಳುವುದಿಲ್ಲ. ಹದೀಸ್ ಮತ್ತು ಸುನ್ನತ್ ಬೇರೆ ಬೇರೆ ಆಗಿವೆ. ಸುನ್ನತ್ ಎಂದರೆ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ ಆಗಿದೆ. ಅದು ನಿರಂತರತೆ ಹೊಂದಿದೆ. (ಎಂದರೆ, ಹಝ್ರತ್ ಪೈಗಂಬರರ(ಸ) ಕಾಲದಿಂದ ಇಂದಿನ ತನಕ ಅದನ್ನು ಮುಸ್ಲಿಮರು ಪಾಲಿಸುತ್ತಲೇ ಬಂದಿರುವರು – ಅನುವಾದಕ) ಅದು ಆರಂಭದಿಂದಲೇ ಪವಿತ್ರ ಖುರ್‌ಆನಿನ ಅವತೀರ್ಣದ ಜೊತೆ ಜೊತೆಗೆ ಪ್ರಕಟವಾಯಿತು ಮತ್ತು ಅದು ಯಾವಾಗಲೂ ಜೊತೆಗಿರುವುದು. ನಾವು ಇದನ್ನು ಬೇರೆ ರೀತಿಯಲ್ಲಿ ಹೀಗೆ ಹೇಳಬಹುದಾಗಿದೆ: ಪವಿತ್ರ ಖುರ್‌ಆನ್ ಅಲ್ಲಾಹನ ವಚನವಾಗಿದೆ ಮತ್ತು ಸುನ್ನತ್ ಎಂಬುದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೃತಿ ರೂಪದಲ್ಲಿ ತೋರಿಸಿದ ನಡೆವಳಿಕೆಯಾಗಿದೆ.

ಆರಂಭ ಕಾಲದಿಂದಲೇ ಅಲ್ಲಾಹನ ನಡೆವಳಿಕೆ ಹೇಗಿದೆ ಎಂದರೆ ಅಲ್ಲಾಹನ ವಚನಗಳನ್ನು ಪ್ರವಾದಿಗಳು ಜನರಿಗೆ ಮಾರ್ಗದರ್ಶನ ನೀಡಲು ತರುವಾಗ ಅವುಗಳನ್ನು ಅರ್ಥ ಮಾಡುವುದರಲ್ಲಿ ಜನರಿಗೆ ಸಂದೇಹ ಮತ್ತು ಗೊಂದಲ ಉಂಟಾಗದಿರಲಿಕ್ಕಾಗಿ ಅವರು ತಮ್ಮ ಕೃತ್ಯಗಳ ಮೂಲಕ ಆ ವಚನಗಳನ್ನು ವ್ಯಾಖ್ಯಾನಿಸಿ ತೋರಿಸುತ್ತಾರೆ. ಎಂದರೆ ಪ್ರವಾದಿಗಳು ಅಲ್ಲಾಹನ ವಚನಗಳ ಪ್ರಕಾರ ಸ್ವತಃ ನಡೆಯುತ್ತಾರೆ ಮತ್ತು ತಮ್ಮ ಅನುಯಾಯಿಗಳನ್ನು ನಡೆಸುತ್ತಾರೆ.

ಮಾರ್ಗದರ್ಶನದ ಮೂರನೆಯ ಮಾರ್ಗ **ಹದೀಸ್** ಆಗಿದೆ. ಹದೀಸುಗಳನ್ನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಿಂದ ನೂರೈವತ್ತು ವರ್ಷಗಳ ನಂತರ ವಿವಿಧ ವರದಿಗಾರರಿಂದ ಸಂಗ್ರಹಿಸಲಾಯಿತು.

ಸುನ್ನತ್ ಮತ್ತು ಹದೀಸುಗಳ ನಡುವೆ ಇರುವ ವ್ಯತ್ಯಾಸವೇನೆಂದರೆ ಸುನ್ನತ್

ಒಂದು ಕರ್ಮದ ರೀತಿಯಾಗಿದೆ. ಅದು ನಿರಂತರತೆಯನ್ನು ಹೊಂದಿದೆ. ಅದನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಜಾರಿಗೊಳಿಸಿದರು. ಅದು ವಿಶ್ವಾಸಾರ್ಹತೆಯಲ್ಲಿ ಪವಿತ್ರ ಖುರ್‌ಆನಿನ ನಂತರ ಎರಡನೆಯ ಸ್ಥಾನದಲ್ಲಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನನ್ನು ಪ್ರಚಾರ ಮಾಡಲು ನಿಯೋಜಿತರಾಗಿದ್ದ ಹಾಗೆಯೇ ಸುನ್ನತನ್ನು ಸ್ಥಾಪಿಸಲು ಸಹ ನಿಯೋಜಿತರಾಗಿದ್ದರು. ಆದ್ದರಿಂದ ಪವಿತ್ರ ಖುರ್‌ಆನ್ ವಿಶ್ವಾಸಾರ್ಹವಾಗಿರುವ ಹಾಗೆಯೇ ನಿರಂತರ ರೂಢಿಯಲ್ಲಿರುವ ಸುನ್ನತ್ ಸಹ ವಿಶ್ವಾಸಾರ್ಹವಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಎರಡು ಸೇವೆಗಳನ್ನು ಸ್ವತಃ ಮಾಡಿದರು ಮತ್ತು ಅವೆರಡನ್ನೂ ಪಾಲಿಸುವುದು ತನ್ನ ಕಡ್ಡಾಯ ಕರ್ತವ್ಯವೆಂದು ಅವರು ಮನವರಿಕೆ ಮಾಡಿದ್ದರು. ಉದಾಹರಣೆಗೆ, ನಮಾಝ್ ನಿರ್ವಹಿಸಬೇಕೆಂದು ಅಲ್ಲಾಹನು ಆಜ್ಞಾಪಿಸಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝ್ ನಿರ್ವಹಿಸುವುದು ಹೇಗೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟರು. ಫಜ್ರ್ ನಮಾಝಿನ ರಕಅತ್ ಇಷ್ಟು, ಮಗ್‌ರಿಬ್ ನಮಾಝಿನ ರಕಅತ್ ಇಷ್ಟು ಮತ್ತು ಉಳಿದ ಮೂರು ನಮಾಝ್‌ಗಳ ರಕಅತ್‌ಗಳು ಇಷ್ಟು ಎಂದು ಅವುಗಳನ್ನು ನಿರ್ವಹಿಸಿ ತೋರಿಸಿಕೊಟ್ಟರು. ಇದೇ ರೀತಿ ಹಜ್ಜ್ ನಿರ್ವಹಿಸಿ ತೋರಿಸಿದರು ಮತ್ತು ಅದನ್ನು ಸಾವಿರಾರು ಸಹಾಬಿಯರು ಪಾಲಿಸುವಂತೆ ಮಾಡಿ, ಈ ಕೃತ್ಯ ಪ್ರಬಲವಾದ ರೀತಿಯಲ್ಲಿ ನಿರಂತರವಾಗಿ ಮುಂದುವರಿಯುವಂತೆ ಆಯಿತು. ಈ ಸಮುದಾಯದಲ್ಲಿ ಈಗಲೂ ಜಾರಿಯಲ್ಲಿದ್ದು ಪ್ರಸಿದ್ಧಿಯನ್ನು ಪಡೆದಿರುವ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾದರಿ ಮತ್ತು ಕೃತ್ಯಗಳ ಹೆಸರು ಸುನ್ನತ್ ಎಂದಾಗಿದೆ. ಆದರೆ ಹದೀಸನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮುಂದೆ ಬರೆಸಲೂ ಇಲ್ಲ ಹಾಗೂ ಹದೀಸುಗಳನ್ನು ಸಂಗ್ರಹಿಸಲು ಅವರು ಯಾವುದೇ ವ್ಯವಸ್ಥೆ ಮಾಡಿಯೂ ಇಲ್ಲ. ಹಝ್ರತ್ ಅಬೂಬಕರ್[ರ] ಕೆಲವು ಹದೀಸುಗಳನ್ನು ಸಂಗ್ರಹಿಸಿದ್ದರು. ಆದರೆ ಅವುಗಳನ್ನು ನೇರವಾಗಿ ಆಲಿಸಿರದ ಕಾರಣದಿಂದ ಅದರ ವಾಸ್ತವಿಕತೆ ಏನೆಂದು ಅಲ್ಲಾಹನು ಮಾತ್ರ ಬಲ್ಲನು ಎಂಬ ದೇವಭಯದಿಂದ ಅವರು ಅವುಗಳನ್ನು ಅನಂತರ ಸುಟ್ಟು ಹಾಕಿದರು. ಸಹಾಬರು ಜೀವಿಸಿದ ಕಾಲಘಟ್ಟ ಕೊನೆಗೊಂಡಾಗ ಹದೀಸುಗಳನ್ನು ಕೂಡ ಸಂಗ್ರಹಿಸಬೇಕೆಂಬ ಅಭಿಲಾಷೆಯನ್ನು ಅನಂತರದ ಪೀಳಿಗೆಯವರಲ್ಲಿ ಅಲ್ಲಾಹನು ಮೂಡಿಸಿದನು. ಹೀಗೆ ಹದೀಸುಗಳನ್ನು

ಸಂಗ್ರಹಿಸಲಾಯಿತು. ಹದೀಸುಗಳನ್ನು ಸಂಗ್ರಹಿಸಿದವರಲ್ಲಿ ಬಹುತೇಕ ಜನರು ಬಹಳ ದೇವಭಯ ಉಳ್ಳವರೂ ಧರ್ಮನಿಷ್ಠರೂ ಆಗಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ಅವರು ತಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಹದೀಸುಗಳನ್ನು ವಿಮರ್ಶಾತ್ಮಕವಾಗಿ ಪರಿಶೋಧಿಸಿದರು ಹಾಗೂ ಅವರ ಅಭಿಪ್ರಾಯದಲ್ಲಿ ನಕಲಿ ಮತ್ತು ಸರಿಯಲ್ಲವೆಂದು ತೋಚಿದ ಹದೀಸುಗಳನ್ನು ಅವರು ತಿರಸ್ಕರಿಸಿದರು ಹಾಗೂ ಸಂಶಯಕರವಾದ ವ್ಯಕ್ತಿತ್ವ ಹೊಂದಿದ ವರದಿಗಾರನ ಹದೀಸುಗಳನ್ನು ಅವರು ಅಂಗೀಕರಿಸಲಿಲ್ಲ. ಅವರು ಬಹಳ ಪರಿಶ್ರಮಪಟ್ಟಿದ್ದರು. ಆದರೆ ಈ ಎಲ್ಲ ಕೆಲಸಗಳನ್ನು ಮಾಡಿದ್ದು ಬಹಳ ವರ್ಷಗಳು ದಾಟಿ ಹೋದ ನಂತರವಾದ ಕಾರಣದಿಂದ ಅವೆಲ್ಲವೂ ಸಂಶಯಕ್ಕೆ ಒಳಪಟ್ಟಿವೆ. ಆದರೆ ಎಲ್ಲ ಹದೀಸುಗಳು ವ್ಯರ್ಥವೂ ನಿರುಪಯುಕ್ತವೂ ಪ್ರಯೋಜನರಹಿತವೂ ಅಸತ್ಯವೂ ಆಗಿವೆ ಎಂದು ಹೇಳುವುದು ತೀವ್ರ ಅನ್ಯಾಯವಾಗಿದೆ. ಬದಲಾಗಿ ಹದೀಸುಗಳನ್ನು ಬರೆಯುವುದರಲ್ಲಿ ಬಹಳ ಜಾಗರೂಕತೆ ವಹಿಸಲಾಗಿತ್ತು. ಅವುಗಳ ಬಗ್ಗೆ ಎಷ್ಟು ಸಂಶೋಧನೆ ಮತ್ತು ವಿಮರ್ಶೆ ನಡೆಸಲಾಯಿತೆಂದರೆ ಅಂತಹ ಕೆಲಸದ ಉದಾಹರಣೆ ಅನ್ಯ ಧರ್ಮಗಳಲ್ಲಿ ಕಾಣಲು ಸಾಧ್ಯವಲ್ಲ. ಯಹೂದಿಯರಲ್ಲಿಯೂ ಹದೀಸುಗಳಿವೆ. ಹಝ್ರತ್ ಈಸಾ ಮಸೀಹರನ್ನು[ಅ] ವಿರೋಧಿಸಿದ್ದು ಹದೀಸುಗಳನ್ನು ಅನುಸರಿಸುವ ಪಂಗಡವಾಗಿತ್ತು. ಆದರೆ ಇಸ್ಲಾಮಿನ ಮುಹದ್ದಿಸರು ಹದೀಸನ್ನು ಸಂಗ್ರಹಿಸಿದ ರೀತಿಯಲ್ಲಿ ಎಚ್ಚರಿಕೆಯಿಂದ ಯಹೂದಿಯರ ಮುಹದ್ದಿಸರು ಹದೀಸುಗಳನ್ನು ಸಂಗ್ರಹಿಸಿದ್ದಾಗಿ ಸಾಬೀತುಗೊಂಡಿಲ್ಲ.

ಆದರೆ ಹದೀಸುಗಳು ಜಮಾಯಿಸಲ್ಪಡುವ ವರೆಗೆ ಅಂದಿನ ಕಾಲದ ಜನರಿಗೆ ನಮಾಝ಼ಿನ ರಕಅತಿನ ಬಗ್ಗೆ ತಿಳಿದಿರಲಿಲ್ಲವೆಂದೋ ಹಜ್ಜ್ ಮಾಡುವ ವಿಧಾನದ ಬಗ್ಗೆ ಗೊತ್ತಿರಲಿಲ್ಲವೆಂದೋ ಭಾವಿಸುವುದು ತಪ್ಪು. ಏಕೆಂದರೆ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಜಾರಿಗೊಂಡ ನಡೆವಳಿಕೆಯನ್ನು ಮುಸ್ಲಿಮರು ನಿರಂತರವಾಗಿ ಮುಂದುವರಿಸಿದ್ದರು. ಅದು ಅವರಿಗೆ ಇಸ್ಲಾಮಿನ ಕಡ್ಡಾಯ ಕರ್ತವ್ಯಗಳನ್ನೂ ಹದ್ದು ಬಸ್ತುಗಳನ್ನೂ ಕಲಿಸಿತ್ತು. ಆದುದರಿಂದ ದೀರ್ಘ ಕಾಲದ ನಂತರ ಸಂಗ್ರಹಿಸಲಾದ ಈ ಹದೀಸುಗಳು ಲೋಕದಲ್ಲಿ ಇರದಿದ್ದರೂ ಇಸ್ಲಾಮಿನ ಮೂಲ ತತ್ವಗಳಿಗೆ ಹಾನಿ ಉಂಟಾಗುತ್ತಿರಲಿಲ್ಲ ಎಂದು ಹೇಳುವುದು ಸರಿಯೇ ಆಗಿದೆ. ಏಕೆಂದರೆ ಪವಿತ್ರ ಖುರ್‌ಆನ್ ಮತ್ತು ನಿರಂತರವಾದ ಅನುಷ್ಠಾನ ಕರ್ಮಗಳು ಆ ಕೊರತೆಯನ್ನು ನೀಗಿಸಿದ್ದುವು. ಹೇಗಿದ್ದರೂ ಹದೀಸುಗಳು ಆ ಪ್ರಕಾಶವನ್ನು

ವರ್ಧಿಸಿದುವು. ಹೀಗೆ ಇಸ್ಲಾಮಿಗೆ ಪ್ರಕಾಶದ ಮೇಲೆ ಪ್ರಕಾಶ ಲಭಿಸಿದಂತಾಯಿತು. ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ಗಳಿಗೆ ಹದೀಸುಗಳು ಸಾಕ್ಷಿಗಳಂತೆ ಆದುವು ಹಾಗೂ ಇಸ್ಲಾಮಿನಲ್ಲಿ ಅನಂತರ ಉಂಟಾದ ಅನೇಕ ಪಂಗಡಗಳ ಪೈಕಿ ಸತ್ಯವಂತ ಪಂಗಡಕ್ಕೆ ವಿಶ್ವಾಸಾರ್ಹ ಮತ್ತು ಅಧಿಕೃತ ಹದೀಸುಗಳಿಂದ ಬಹಳ ಲಾಭವುಂಟಾಯಿತು. ಆದ್ದರಿಂದ ಸರಿಯಾದ ಧಾರ್ಮಿಕ ನಿಲುವು ಮತ್ತು ಮಾರ್ಗವೇನೆಂದರೆ, ಈ ಕಾಲದ ಅಹ್ಲೆ ಹದೀಸ್ ಪಂಗಡದ ಹಾಗೆ ಹದೀಸುಗಳಿಗೆ ಪವಿತ್ರ ಖುರ್‌ಆನಿನ ಮೇಲೆ ಆದ್ಯತೆ ನೀಡಬಾರದು. ಹದೀಸುಗಳಲ್ಲಿ ವಿವರಿಸಲಾದ ವಿಷಯಗಳು ಪವಿತ್ರ ಖುರ್‌ಆನಿಗೆ ಸಂಪೂರ್ಣವಾಗಿ ವಿರುದ್ಧವಾಗಿದ್ದರೆ ಹದೀಸುಗಳಿಗೆ ಆದ್ಯತೆ ನೀಡಿ ಪವಿತ್ರ ಖುರ್‌ಆನನ್ನು ಬಿಟ್ಟುಬಿಡಬಾರದು. ಅದೇ ವೇಳೆ ಮೌಲವಿ ಅಬ್ದುಲ್ಲಾಹ್ ಚಕ್‌ಡಾಲವಿಯ ನಂಬಿಕೆ ಪ್ರಕಾರ ಹದೀಸುಗಳನ್ನು ವ್ಯರ್ಥ ಮತ್ತು ನಿರರ್ಥಕವೆಂದು ಗಣಿಸಲೂ ಬಾರದು. ಬದಲಾಗಿ ಪವಿತ್ರ ಖುರ್‌ಆನ್ ಮತ್ತು ಸುನ್ನತನ್ನು ಹದೀಸುಗಳ ಮೇಲೆ ತೀರ್ಪುಗಾರರನ್ನಾಗಿ ಕಾಣಬೇಕು. ಪವಿತ್ರ ಖುರ್‌ಆನ್ ಮತ್ತು ಸುನ್ನತಿಗೆ ವಿರುದ್ಧವಾಗಿರದ ಹದೀಸುಗಳನ್ನು ಮನಸ್ಸಾರೆ ಶಿರಭಾಗಿ ಅಂಗೀಕರಿಸಬೇಕು. ಇದೇ ನೇರವಾದ ಮಾರ್ಗವಾಗಿದೆ. ಇದನ್ನು ಪಾಲಿಸುವವರು ಅನುಗ್ರಹೀತರು. ಈ ನಿಯಮವನ್ನು ಪರಿಗಣಿಸದೆ ಹದೀಸುಗಳನ್ನು ತಿರಸ್ಕರಿಸುವವನು ಅತ್ಯಂತ ಭಾಗ್ಯಹೀನ.*

ನಮ್ಮ ಜಮಾಅತಿಗೆ ಕಡ್ಡಾಯವಾಗಿರುವುದೇನೆಂದರೆ, ಒಂದು ಹದೀಸು, ಪವಿತ್ರ

* ಕಳೆದ ರಾತ್ರಿ ಕನಸಿನಲ್ಲಿ ಒಂದು ದೊಡ್ಡ ಮರದಲ್ಲಿ ಅತ್ಯಂತ ಸ್ವಾದಿಷ್ಟ ಮತ್ತು ಸುಂದರ ಹಣ್ಣುಗಳಿರುವುದನ್ನು ನಾನು ಕಂಡೆನು. ಒಂದು ಗುಂಪಿನ ಜನರು ಆ ಮರಕ್ಕೆ ಒಂದು ಬಳ್ಳಿಯನ್ನು ಹಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಬೇರು ಇಲ್ಲದಿದ್ದರೂ ಅದು ಮರಕ್ಕೆ ತಗಲಿದೆ. ಅದು ಪರಾವಲಂಬಿ ಬಳ್ಳಿಯ ಹಾಗಿದೆ. ಆ ಬಳ್ಳಿ ಬೆಳೆಯುತ್ತಾ ಮರದ ಹಣ್ಣುಗಳಿಗೆ ಹಾನಿ ಉಂಟುಮಾಡುತ್ತಿದೆ. ಆ ಸುಂದರ ಮರದಲ್ಲಿ ವೈಕಲ್ಯ ಮತ್ತು ವಿರೂಪ ಉಂಟಾಗುತ್ತದೆ. ಆ ಮರದಿಂದ ದೊರಕಬಹುದಾದ ಹಣ್ಣುಗಳು ನಷ್ಟವಾಗುವ ಬಲವಾದ ಶಂಕೆಯಿದೆ ಮತ್ತು ಕೆಲವು ಹಣ್ಣುಗಳು ನಾಶವಾದುವು. ಆಗ ನನ್ನ ಮನಸ್ಸು ಇದನ್ನು ನೋಡಿ ಗಾಬರಿಗೊಂಡಿತು ಮತ್ತು ಕರಗಿತು. ಈ ಮರ ಯಾವುದು ಮತ್ತು ಇಂತಹ ಸುಂದರ ಮರವನ್ನು ತನ್ನ ಹಿಡಿತದಲ್ಲಿರಿಸಿರುವ ಈ ಬಳ್ಳಿ ಯಾವುದು ಎಂದು ನಾನು ಒಳ್ಳೆಯ ಮತ್ತು ಸಾತ್ವಿಕನಾಗಿ ತೋರುವ ಒಬ್ಬನೊಡನೆ ಕೇಳಿದೆನು. ಆ ವ್ಯಕ್ತಿ ಹೇಳಿದನು: ಈ ಮರ ಅಲ್ಲಾಹನ ವಚನವಾದ ಪವಿತ್ರ ಖುರ್‌ಆನ್ ಆಗಿದೆ. ಈ ಬಳ್ಳಿ ಪವಿತ್ರ ಖುರ್‌ಆನಿಗೆ ವಿರುದ್ಧವಾದ ಅಥವಾ ವಿರುದ್ಧವೆಂದು ಹೇಳಲ್ಪಡುವ ಹದೀಸುಗಳು ಮತ್ತು ಹೇಳಿಕೆಗಳಾಗಿವೆ. ಅವುಗಳ ಬಹುಸಂಖ್ಯೆ ಈ ಮರವನ್ನು ದಬ್ಬಿ ಹಾಕಿ ಅದಕ್ಕೆ ಹಾನಿ ಉಂಟುಮಾಡುತ್ತಿವೆ. ಆಗ ನನ್ನ ಕಣ್ಣು ತೆರೆಯಿತು. ನಾನು ಎಚ್ಚರಗೊಂಡ ಕೂಡಲೆ ರಾತ್ರಿ ಹೊತ್ತಿನಲ್ಲಿ ಈ ಲೇಖನ ಬರೆಯುತ್ತಿದ್ದೇನೆ. ಈಗ ಇದನ್ನು ಮುಕ್ತಾಯಗೊಳಿಸುತ್ತಿದ್ದೇನೆ. ಅದು ಶನಿವಾರ ರಾತ್ರಿ 1.40 ಆಗಿತ್ತು. **ಫಲ್‌ಹಮ್ದುಲಿಲ್ಲಾಹಿ ಅಲಾ ಧಾಲಿಕ.**

ಖುರ್‌ಆನ್ ಮತ್ತು ಸುನ್ನತಿಗೆ ವಿರುದ್ಧವಾಗಿರದಿದ್ದರೆ ಅದು ಎಷ್ಟು ಕೆಳಮಟ್ಟದ ಹದೀಸಾಗಿದ್ದರೂ ಅದರ ಪ್ರಕಾರ ನಡೆಯಿರಿ ಮತ್ತು ಮನುಷ್ಯ ನಿರ್ಮಿತವಾದ ಕರ್ಮಶಾಸ್ತ್ರದ (ಫಿಕ್‌ಹ್) ಮೇಲೆ ಅದಕ್ಕೆ ಆದ್ಯತೆ ನೀಡಿರಿ. ಪವಿತ್ರ ಖುರ್‌ಆನಿನಲ್ಲಿ, ಹದೀಸಿನಲ್ಲಿ, ಸುನ್ನತಿನಲ್ಲಿ ಯಾವುದೇ ಸಮಸ್ಯೆಗೆ ಪರಿಹಾರ ಸಿಗದಿದ್ದರೆ ಹನಫೀ ಕರ್ಮಶಾಸ್ತ್ರ ಪ್ರಕಾರ ಕಾರ್ಯ ನಿರ್ವಹಿಸಿರಿ. ಏಕೆಂದರೆ ಬಹುತೇಕ ಮುಸ್ಲಿಮರು ಈ ಪಂಗಡದಲ್ಲಿ ಇರುವರು. ಇದು ಅಲ್ಲಾಹನ ಇಚ್ಛೆಯನ್ನು ಸೂಚಿಸುತ್ತದೆ. ಇಂದಿನ ಕಾಲದ ಕೆಲವು ಬದಲಾವಣೆಗಳ ಕಾರಣದಿಂದ ಹನಫೀ ಕರ್ಮಶಾಸ್ತ್ರ (ಫಿಕ್‌ಹ್) ಸರಿಯಾದ ತೀರ್ಪು ನೀಡಲು ಸಮರ್ಥವಲ್ಲವಾದರೆ ಈ ಜಮಾಅತಿನ ವಿದ್ವಾಂಸರು ತಮಗೆ ಅಲ್ಲಾಹನು ನೀಡಿದ ಚಿಂತನ ಶಕ್ತಿಯನ್ನು ಉಪಯೋಗಿಸಲಿ. ಆದರೆ ಜಾಗರೂಕರಾಗಿರಿ. ಮೌಲವಿ ಅಬ್ದುಲ್ಲಾಹ್ ಚಕ್‌ಡಾಲವಿಯ ಹಾಗೆ ವಿನಾ ಕಾರಣ ಹದೀಸುಗಳನ್ನು ತಿರಸ್ಕರಿಸಬೇಡಿರಿ. ಪವಿತ್ರ ಖುರ್‌ಆನ್ ಮತ್ತು ಸುನ್ನತಿಗೆ ಯಾವುದಾದರೂ ಹದೀಸು ವಿರುದ್ಧವಾಗಿದ್ದರೆ ಆ ಹದೀಸನ್ನು ಬಿಟ್ಟುಬಿಡಿರಿ. ನೆನಪಿಡಿರಿ, ನಮ್ಮ ಜಮಾಅತ್ ಅಹ್ಲೆ ಹದೀಸ್ ಪಂಗಡಕ್ಕೆ ಹೆಚ್ಚು ಸಮೀಪವಾಗಿದೆ. ಅಬ್ದುಲ್ಲಾಹ್ ಚಕ್‌ಡಾಲವಿಯ ಅವಿವೇಕಭರಿತ ಯೋಚನೆಗಳೊಂದಿಗೆ ನಮಗೆ ಯಾವ ಸಂಬಂಧವೂ ಇಲ್ಲ. ನಮ್ಮ ಜಮಾಅತಿಗೆ ಸೇರಿದ ಪ್ರತಿಯೊಬ್ಬನು ಅಬ್ದುಲ್ಲಾಹ್ ಚಕ್‌ಡಾಲವಿ ಹದೀಸುಗಳ ಬಗ್ಗೆ ಹೊಂದಿರುವ ನಂಬಿಕೆಗಳ ಸಂಬಂಧಿಸಿ ಹೃತ್ಪೂರ್ವಕವಾದ ದ್ವೇಷ ಮತ್ತು ಬೇಸರ ಹೊಂದಬೇಕು. ಅಂತಹ ಜನರಿಂದ ಸಾಧ್ಯವಿರುವಷ್ಟು ದೂರವಿರಿ. ಇದು ಇತರ ಎಲ್ಲ ಪಂಗಡಗಳಿಗಿಂತ ಹೆಚ್ಚು ಕೆಟ್ಟು ಹೋದ ಪಂಗಡವಾಗಿದೆ.* ನನ್ನ ಜಮಾಅತಿನ ಜನರು ಮೌಲವಿ ಮುಹಮ್ಮದ್ ಹುಸೇನ್ ಸಾಹಿಬರ ಗುಂಪಿನವರ ಹಾಗೆ ಹದೀಸಿಗೆ ಮಿತಿಮೀರಿದ ಒತ್ತು ಕೊಡಬಾರದು. ಅದೇ ವೇಳೆ ಮೌಲವಿ ಅಬ್ದುಲ್ಲಾಹ್‌ರ ಹಾಗೆ ಅವುಗಳನ್ನು ಪೂರ್ಣವಾಗಿ ತಿರಸ್ಕರಿಸಬಾರದು. ಬದಲಾಗಿ ಈ ವಿಷಯದಲ್ಲಿ ಮಧ್ಯಮ ಮಾರ್ಗವನ್ನು ಕೈಗೊಳ್ಳಬೇಕು. ಅದೇನೆಂದರೆ, ಎಲ್ಲ

---

* ಇದೇ ರಾತ್ರಿ 3 ಗಂಟೆ ಕಳೆದು 2 ನಿಮಿಷದ ನಂತರ ಒಂದು ದಿವ್ಯವಾಣಿ ಉಂಟಾಯಿತು. ಅದು ಹೀಗೆ: **ಅಲ್‌ರಿಝ್ಝ್ ಅನ್ ಧ಼ಿಕ್ರಿ. ನಬ್ತಲೀಹು ಬಿ ಧ಼ುರ್ರಿಯತಿನ್ ಫಾಸಿಖತಿನ್ ಮುಲ್‌ಹಿದತಿನ್. ಯಮೀಲೂನ ಇಲದ್ದುನ್‌ಯಾ ವಲಾ ಯಅ್‌ಬುದೂನನೀ ಶೈಅನ್**. ಎಂದರೆ, ಯಾರು ಪವಿತ್ರ ಖುರ್‌ಆನಿನಿಂದ ಮುಖ ತಿರುಗಿಸುತ್ತಾನೋ ನಾವು ಆತನಿಗೆ ನೀಚ ಮಕ್ಕಳನ್ನು ನೀಡುವೆವು. ಅವರು ನಾಸ್ತಿಕರಾಗಿ ಜೀವಿಸುವರು. ಅವರು ಲೌಕಿಕತೆಯಲ್ಲಿ ಮುಳುಗುವರು. ಅವರು ಕಿಂಚಿತ್ತೂ ನನ್ನ ಆರಾಧನೆ ಮಾಡಲಾರರು. ಎಂದರೆ ಅಂತಹ ಮಕ್ಕಳ ಅಂತಿಮಗತಿ ಕೆಟ್ಟದಾಗುವುದು. ಅವರಿಗೆ ಪಶ್ಚಾತ್ತಾಪ ಮಾಡಲು ಮತ್ತು ದೇವಭಕ್ತಿ ತೋರಿಸಲು ಸೌಭಾಗ್ಯ ಲಭಿಸದು.

ವಿಷಯಗಳಿಗೂ ಹದೀಸನ್ನು ಪೂರ್ಣವಾಗಿ ಅವಲಂಬಿಸಿ ಅದರ ಕಡೆಗೆ ತಿರುಗಬೇಡಿರಿ ಮತ್ತು ಪವಿತ್ರ ಖುರ್‌ಆನನ್ನು ಕೈಬಿಡದಿರಿ. ಅದೇ ವೇಳೆ ಹಝ್ರತ್ ಪೈಗಂಬರರ(ಸ) ನುಡಿಮುತ್ತುಗಳು ನಮಗೆ ಪೂರ್ಣವಾಗಿ ನಷ್ಟವಾಗುವ ರೀತಿಯಲ್ಲಿ ಹದೀಸುಗಳನ್ನು ವ್ಯರ್ಥ ಮತ್ತು ನಿರರ್ಥಕವೆಂದು ಗಣಿಸಬೇಡಿರಿ. ಅದೇ ರೀತಿಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಖಾತಮುನ್ನಬಿಯ್ಯೀನ್ ಎಂಬುದನ್ನು ನಿರಾಕರಿಸಬೇಡಿರಿ.

ಅದೇ ವೇಳೆ ಈ ಸಮುದಾಯಕ್ಕೆ ದಿವ್ಯವಾಣಿ ಲಭಿಸುವ ಬಾಗಿಲು ಮುಚ್ಚಿದೆ ಎಂಬ ರೀತಿಯಲ್ಲಿ ಖಾತಮುನ್ನಬಿಯ್ಯೀನ್ ಎಂಬುದಕ್ಕೆ ಅರ್ಥ ಕೊಡಬೇಡಿರಿ. ನೆನಪಿಟ್ಟುಕೊಳ್ಳಿರಿ, ಕೊನೆಯ ಗ್ರಂಥ ಮತ್ತು ಕೊನೆಯ ಶರೀಅತ್ ಖುರ್‌ಆನ್ ಆಗಿದೆ ಎಂಬುದಾಗಿದೆ ನಮ್ಮ ವಿಶ್ವಾಸ. ಅದರ ನಂತರ ಶರೀಅತ್ ತರುವ ಪ್ರವಾದಿಯಾಗಲಿ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದೆ ದೇವ ಸಂದೇಶವಾಣಿ ಗಳಿಸುವ ಪ್ರವಾದಿಯಾಗಲಿ ಆಗಮಿಸಲಾರರು. ಖಿಯಾಮತ್ (ಕೊನೆಗಾಲ) ತನಕ ಇಂತಹ ಪ್ರವಾದಿಗಳು ಆಗಮಿಸುವ ಬಾಗಿಲು ಮುಚ್ಚಲ್ಪಟ್ಟಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿ ದಿವ್ಯವಾಣಿಯ ಅನುಗ್ರಹ ಗಳಿಸುವ ಬಾಗಿಲು ಖಿಯಾಮತ್ ತನಕ ತೆರೆದಿದೆ. ಹಝ್ರತ್ ಪೈಗಂಬರರನ್ನು(ಸ) ಅನುಸರಿಸುವ ಮೂಲಕ ದೊರಕುವ ಸಂದೇಶವಾಣಿ ಎಂದೂ ಕೊನೆಗೊಳ್ಳದು. ಆದರೆ ಶರೀಅತಿನೊಂದಿಗಿರುವ ಪ್ರವಾದಿತ್ವ ಹಾಗೂ ಸ್ವತಂತ್ರ ಪ್ರವಾದಿತ್ವ ಕೊನೆಗೊಂಡಿದೆ.

**ವಲಾ ಸಬೀಲ ಇಲೈಹಾ ಇಲಾ ಯೌಮಿಲ್ ಖಿಯಾಮತಿ ವ ಮನ್‌ಖಾಲ ಇನ್ನೀ ಲಸ್‌ತು ಮಿನ್ ಉಮ್ಮತಿ ಮುಹಮ್ಮದಿನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ವ ಅದ್‌ಆ ಅನ್ನಹೂ ನಬಿಯುನ್ ಸಾಹಿಬುಶ್ಶರೀಅತಿ ಅವ್ ಮಿನ್‌ದೂನಿಶ್ಶರೀಅತಿ ವ ಲೈಸ ಮಿನಲ್ ಉಮ್ಮತಿ ಫಮಸಲುಹು ಕಮಸಲಿ ರಜುಲುನ್ ಗ್‌ಮರಹುಸ್ಸೈಲುಲ್ ಮುನ್‌ಹಮಿರ್ ಫ ಅಲ್‌ಖಾಹು ವರಾಅಹೂ ವಲಮ್ ಯುಗ್ಹಾದಿರ್ ಹತ್ತಾ ಮಾತ.**

ಅರ್ಥ: ಖಿಯಾಮತ್ ತನಕ ಅಂತಹ ನುಬುವ್ವತ್ ಇಲ್ಲ. ಒಬ್ಬನು ತಾನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಮ್ಮತಿಯಲ್ಲ ಎಂದು ಹೇಳಿ ತಾನು ಶರೀಅತ್ ತಂದ ನಬಿ ಅಥವಾ ಶರೀಅತ್ ರಹಿತ ನಬಿ ಎಂದು ವಾದಿಸುವುದಾದರೆ ಆತನ ಸ್ಥಿತಿ ಜಲಪ್ರಳಯದಲ್ಲಿ ಮುಳುಗಿ ಸತ್ತು ಹೋಗುವವನದ್ದಾಗಿದೆ.

ಇದರ ವಿವರಣೆ ಹೀಗೆ: ಅಲ್ಲಾಹನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಖಾತಮುಲ್ ಅಂಬಿಯಾ (ಪ್ರವಾದಿಗಳ ಮುದ್ರೆ) ಎಂದು ವಾಗ್ದಾನ ಮಾಡಿದ ಸ್ಥಳದಲ್ಲಿಯೇ ಹೀಗೆಯೂ ಸೂಚಿಸಿದ್ದಾನೆ; ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಾತ್ವಿಕರಿಗೆ ಆಧ್ಯಾತ್ಮಿಕ ಪಿತ ಆಗಿರುವರು ಮತ್ತು ಅವರನ್ನು ಅನುಸರಿಸುವವರ ಆತ್ಮಗಳನ್ನು ಪರಿಪೂರ್ಣಗೊಳಿಸಲಾಗುವುದು ಹಾಗೂ ಅಂತಹ ವ್ಯಕ್ತಿಗಳಿಗೆ ಅಲ್ಲಾಹನೊಂದಿಗೆ ಸಂಭಾಷಣೆ ನಡೆಸುವ ಮತ್ತು ದಿವ್ಯವಾಣಿ ಲಭಿಸುವ ಭಾಗ್ಯ ಲಭಿಸುವುದು. ಈ ಕುರಿತು ಪವಿತ್ರ ಖುರ್‌ಆನಿನಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ:

مَا كَانَ مُحَمَّدٌ اَبَآ اَحَدٍ مِّنْ رِّجَالِكُمْ وَلٰكِنْ رَّسُوْلَ اللّٰهِ وَخَاتَمَ النَّبِيّٖنَ ؕ

**ಮಾಕಾನ ಮುಹಮ್ಮದುನ್ ಅಬಾ ಅಹದಿನ್ ಮಿನ್‌ರ್ರಿಜಾಲಿಕುಮ್ ವಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ್**

ಅರ್ಥ: ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತನಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕ ಮತ್ತು ಖಾತಮುನ್ನಬಿಯ್ಯೀನ್ ಆಗಿರುವರು. (33:41).

**ಲಾಕಿನ್** ("ಆದರೆ" ಎಂದರ್ಥ – ಅನುವಾದಕ) ಎಂಬ ಪದವನ್ನು ಅರಬಿ ಭಾಷೆಯಲ್ಲಿ ವಿರುದ್ಧಾರ್ಥ ಸೂಚಕವಾಗಿ ಬಳಸಲಾಗುತ್ತದೆ. ಎಂದರೆ ಹಿಂದೆ ಹೇಳಿದ್ದಕ್ಕೆ ವಿರುದ್ಧವಾಗಿ ಅಥವಾ ಅದನ್ನು ಸರಿದೂಗಿಸಲು ಬಳಸಲಾಗುತ್ತದೆ. ಎಂದರೆ ಈ ವಚನದ ಪ್ರಥಮ ಭಾಗದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಬಂಧಿಸಿ ಯಾವುದನ್ನು ಅಲ್ಲಗಳೆಯಲಾಗಿದೆಯೋ ಅದು ಅವರು ಶಾರೀರಿಕವಾಗಿ ಯಾರ ಪಿತನೂ ಅಲ್ಲ ಎಂಬ ಸಂಗತಿಯನ್ನು ಆಗಿದೆ. ಆದರೆ **'ಲಾಕಿನ್'** ಅಥವಾ **'ಆದರೆ'** ಎಂಬ ಪದ ಬಳಸಿ ಅದನ್ನು ಎರಡನೇ ಭಾಗದಲ್ಲಿ ಸರಿದೂಗಿಸಲಾಗಿದೆ. ಎಂದರೆ ಅವರು **ಖಾತಮುಲ್ ಅಂಬಿಯಾ** ಆಗಿದ್ದಾರೆ ಎಂದು ಹೇಳಲಾಗಿದೆ. ಅದರ ಅರ್ಥವೇನೆಂದರೆ, ಅವರ ಆಗಮನದ ನಂತರ ಅಲ್ಲಾಹನಿಂದ ನೇರವಾಗಿ ದೊರಕುವ ಪ್ರವಾದಿತ್ವ (ನುಬುವ್ವತ್) ಕೊನೆಗೊಂಡಿದೆ. ಈಗ ಯಾರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವನಾಗಿ ತನ್ನ ಅನುಸರಣೆ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಂಗೀಕಾರದ ಮುದ್ರೆ

ಗಳಿಸುತ್ತಾನೋ ಆತನಿಗೆ ಮಾತ್ರ ಪ್ರವಾದಿತ್ವ ಎಂಬ ಅನುಗ್ರಹ ದೊರಕುವುದು. ಅಂತಹ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಧ್ಯಾತ್ಮಿಕ ಪುತ್ರನೂ ವಾರಸುದಾರನೂ ಆಗುತ್ತಾನೆ. ಒಟ್ಟಾರೆ ಹೇಳುವುದಾದರೆ, ಪವಿತ್ರ ಖುರ್‌ಆನಿನ ಈ ವಚನದಲ್ಲಿ ಒಂದು ರೀತಿಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪಿತನಲ್ಲವೆಂದು ಹೇಳಲಾಗಿದೆ. ಆದರೆ ಇನ್ನೊಂದು ರೀತಿಯಲ್ಲಿ ಅವರು ಪಿತನಾಗಿರುವವರು ಎಂದು ಹೇಳಲಾಗಿದೆ. ಈ ರೀತಿಯಾಗಿ "**ಇನ್ನ ಶಾನಿಅಕ ಹುವಲ್ ಅಬ್‌ತರ್**" – ನಿಸ್ಸಂಶಯವಾಗಿಯೂ ನಿನ್ನ ಶತ್ರುವೇ ಪುತ್ರ ಸಂತಾನ ರಹಿತನು. (108:4) ಎಂಬ ಪವಿತ್ರ ಖುರ್‌ಆನಿನ ವಚನದಲ್ಲಿ ಸೂಚಿಸಲಾದ ಆಕ್ಷೇಪವನ್ನು ದೂರೀಕರಿಸಲಾಗಿದೆ.

ಈ ವಚನದ ಸಾರಾಂಶವೇನೆಂದರೆ, ಶರೀಅತ್ ಇಲ್ಲದ ನುಬುವ್ವತ್ ಕೂಡ ಇನ್ನು ಮುಂದೆ ನೇರವಾಗಿ ಲಭಿಸದು. ಆದರೆ ಹಝ್ರತ್ ಪೈಗಂಬರರ(ಸ) ಪ್ರವಾದಿತ್ವ ಎಂಬ ದೀಪದಿಂದ ಲಾಭ ಪಡೆದು ಪ್ರವಾದಿತ್ವ ಸ್ಥಾನ ಗಳಿಸುವುದನ್ನು ತಡೆಯಲಾಗಿಲ್ಲ. ಅಂತಹ ಪ್ರವಾದಿತ್ವ ಗಳಿಸಿದ ವ್ಯಕ್ತಿ ಒಂದೆಡೆ ಹಝ್ರತ್ ಪೈಗಂಬರರನ್ನು(ಸ) ಅನುಸರಿಸುವವನಾಗಿರುತ್ತಾನೆ; ಮತ್ತೊಂದೆಡೆ ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದಿಂದ ಪ್ರಕಾಶ ಗಳಿಸಿದವನೂ ಆಗಿರುತ್ತಾನೆ.

ಈ ಸಮುದಾಯಕ್ಕೆ ಇಂತಹ ಪ್ರವಾದಿತ್ವ ಸ್ಥಾನ ದೊರಕುವುದನ್ನು ಕೂಡ ನಿರಾಕರಿಸುವುದಾದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಎರಡು ರೀತಿಗಳಲ್ಲೂ, ಎಂದರೆ ಶಾರೀರಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಪುತ್ರಹೀನರಾಗುತ್ತಾರೆ. (ನಊಧುಬಿಲ್ಲಾಹ್.) ಹಾಗಾದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪುತ್ರಹೀನ ಆಗಿರುವರು ಎಂದು ಆಕ್ಷೇಪಿಸುವವನ ಆಕ್ಷೇಪ ಸತ್ಯವಾಗುತ್ತದೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಅಲ್ಲಾಹನಿಂದ ನೇರವಾಗಿ ದೊರಕುವ ಸ್ವತಂತ್ರ ನುಬುವ್ವತ್ (ನುಬುವ್ವತ್ ಮುಸ್ತಖಿಲ) ಕೊನೆಗೊಂಡಿದೆ ಎಂದು ಈಗ ಸಾಬೀತಾಗಿದೆ.* ಇಂತಹ ನುಬುವ್ವತಿನ ಬಾಗಿಲು ಖಿಯಾಮತ್ ತನಕ ಮುಚ್ಚಲ್ಪಟ್ಟಿದೆ. ಒಬ್ಬನು ನಿಜವಾಗಿಯೂ ಹಝ್ರತ್ ಪೈಗಂಬರ್

* ನಿಮ್ಮಲ್ಲಿ ಮೂವತ್ತು ದಜ್ಜಾಲರು ಆಗಮಿಸುವರು. ಅವರಲ್ಲಿ ಪ್ರತಿಯೊಬ್ಬನು ನುಬುವ್ವತ್ ವಾದ ಮಾಡುವನು ಎಂದು ನಮ್ಮ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಶುಭವಾರ್ತೆ

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯಕ್ಕೆ ಸೇರಿದವನು (ಉಮ್ಮತಿ) ಆಗದೇ ಮತ್ತು ಹಝ್‌ರತ್ ಪೈಗಂಬರರ(ಸ) ಗುಲಾಮನಾಗಿ ತನ್ನನ್ನು ಮಾಡಿಕೊಳ್ಳದೇ ಪ್ರವಾದಿತ್ವ ಸ್ಥಾನವನ್ನು ಗಳಿಸಲಾರ. ಇಂತಹ ಸ್ಥಿತಿಯಲ್ಲಿ ಹಝ್‌ರತ್ ಈಸಾ ಅಲೈಹಿಸ್ಸಲಾಮರನ್ನು ಆಕಾಶದಿಂದ ಇಳಿಸುವುದು ಮತ್ತು ಅನಂತರ ಅವರನ್ನು ಉಮ್ಮತೀ ಎಂದು ಕರೆಯುವುದು ಹಾಗೂ ಅವರು ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನ ದೀಪದಿಂದ ಅನುಗ್ರಹ ಪಡೆದವರೆಂದು ಹೇಳುವುದು ಎಷ್ಟು ಪ್ರಯಾಸಪಟ್ಟು ರಚಿಸಿದ ಅನಾವಶ್ಯಕ ಸಿದ್ಧಾಂತವಾಗಿದೆ. ಒಬ್ಬ ವ್ಯಕ್ತಿ ಮೊದಲೇ ಪ್ರವಾದಿಯಾಗಿರುವಾಗ ಆ ವ್ಯಕ್ತಿಯ ಬಗ್ಗೆ ಹಝ್‌ರತ್ ಮುಹಮ್ಮದ್‌ರ(ಸ) ನುಬುವ್ವತಿನ ದೀಪದಿಂದ ಅನುಗ್ರಹ ಪಡೆದವನೆಂದು ಹೇಳುವುದು ಹೇಗೆ ತಾನೆ ಸರಿಯಾಗುವುದು? ಆ ವ್ಯಕ್ತಿಯ ಪ್ರವಾದಿತ್ವ ಹಝ್‌ರತ್ ಮುಹಮ್ಮದ್‌ರ(ಸ) ನುಬುವ್ವತಿನ ದೀಪದಿಂದ ಪ್ರಕಾಶ ಗಳಿಸಿಲ್ಲವಾದರೆ ಆತನನ್ನು ಉಮ್ಮತೀ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಒಬ್ಬನನ್ನು ಉಮ್ಮತೀ ಎಂದು ಹೇಳುವುದು ಆತನು ಯಾರನ್ನು ಅನುಸರಿಸುತ್ತಾನೋ ಆ ವ್ಯಕ್ತಿಯ ಮೂಲಕ ಪ್ರತಿಯೊಂದು ಅನುಗ್ರಹವನ್ನು ಗಳಿಸುವಾಗ ಮಾತ್ರವಾಗಿದೆ. ಹೀಗಿರುವಾಗ ಒಬ್ಬನು ಸ್ವತಃ ಪ್ರವಾದಿ ಎಂಬ ಬಹಳ ದೊಡ್ಡ ಅನುಗ್ರಹ ಸ್ವತಃ ಗಳಿಸಿರುವಾಗ ಆತನು ಉಮ್ಮತೀ ಆಗುವುದಾದರೂ ಹೇಗೆ? ಅಂತಹ ವ್ಯಕ್ತಿ ಸ್ವತಂತ್ರ ಪ್ರವಾದಿ ಆಗಿರುತ್ತಾನೆ. ಅಂತಹವನಿಗೆ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ನಂತರ ಬರಲು ಸಾಧ್ಯವಲ್ಲ. ಹಝ್‌ರತ್ ಈಸಾ ಅಲೈಹಿಸ್ಸಲಾಮರಿಗೆ ನೇರವಾಗಿ ಲಭಿಸಿದ

---

ನೀಡಿದ್ದಾರೆ ಎಂದು ಕೆಲವು ಅಲ್ಪಮತಿಗಳು ನನ್ನ ವಿರುದ್ಧ ಆಕ್ಷೇಪಿಸುತ್ತಾರೆ. ಇದಕ್ಕೆ ಉತ್ತರ ಹೀಗೆ: ಎಲೈ ಅವಿವೇಕಿಗಳೇ, ಭಾಗ್ಯಹೀನರೇ, ನಿಮ್ಮ ಅದೃಷ್ಟದಲ್ಲಿ ಮೂವತ್ತು ದಜ್ಜಾಲರು ಮಾತ್ರ ಬರೆ–ಯಲ್ಪಟ್ಟಿರುವರೋ? ಹದಿನಾಲ್ಕನೆಯ ಶತಮಾನದ ಐದರಲ್ಲಿ ಒಂದು ಭಾಗ ದಾಟಿ ಹೋಗಿದೆ. ಖಿಲಾಫತಿನ ಚಂದ್ರ ತನ್ನ ಹದಿನಾಲ್ಕು ಹಂತಗಳನ್ನು ಪೂರ್ತಿಗೊಳಿಸಿದೆ. ಅದರ ಬಗ್ಗೆ ವಲ್ ಖಮರ ಖದ್ದರ್‌ನಾಹು ಮನಾಝಿಲ (ಚಂದ್ರನಿಗೆ ನಾವು ಕೆಲವು ಹಂತಗಳನ್ನು ನಿರ್ಣಯಿಸಿದ್ದೇವೆ; 36:40) ಎಂಬ ಪವಿತ್ರ ಖುರ್‌ಆನಿನ ವಚನ ಸೂಚನೆ ನೀಡುತ್ತಿದೆ. ಲೋಕವು ಕೊನೆಗೊಳ್ಳತೊಡಗಿದೆ. ಆದರೆ ನಿಮ್ಮ ದಜ್ಜಾಲರ ಆಗಮನ ಕೊನೆಗೊಂಡಿಲ್ಲ. ಪ್ರಾಯಶಃ ನಿಮ್ಮ ಮರಣದ ತನಕ ಅವರು ನಿಮ್ಮ ಜೊತೆಗಿರುವರು.

ಎಲೈ ತಿಳಿಗೇಡಿಗಳೇ, ದಜ್ಜಾಲ್ ಎಂದು ಕರೆಯಲ್ಪಡುವ ಶೈತಾನ್ ನಿಮ್ಮ ಒಳಗೆಯೇ ಇದ್ದಾನೆ. ಆದುದರಿಂದ ನಿಮಗೆ ಕಾಲಘಟ್ಟವನ್ನು ಗುರುತಿಸಲು ಆಗುತ್ತಿಲ್ಲ. ನೀವು ದೈವಿಕ ದೃಷ್ಟಾಂತಗಳನ್ನು ಕಾಣುತ್ತಿಲ್ಲ. ಆದರೆ ನಿಮ್ಮ ಬಗ್ಗೆ ನಾನು ಏಕೆ ವ್ಯಾಕುಲಪಡಬೇಕು. ಹಝ್‌ರತ್ ಮೂಸಾ ಅಲೈಹಿ–ಸ್ಸಲಾಮರ ನಂತರ ಹದಿನಾಲ್ಕನೆ ಶತಮಾನದಲ್ಲಿ ನನ್ನ ಹಾಗೆ ಆಗಮಿಸಿದ (ಈಸಾ ಮಸೀಹರನ್ನು) ದುಷ್ಟ ಯಹೂದಿಯರು ದಜ್ಜಾಲ್ ಎಂದೇ ಹೆಸರಿಸಿದ್ದರು. **ಫಲ್ ಖುಲೂಬು ತಶಾಬಹತ್ ಅಲ್ಲಾ–ಹುಮ್ಮರ್‌ಹಮ್.** (ಆದುದರಿಂದ ಈ ಜನರ ಹೃದಯಗಳು ಪರಸ್ಪರ ಹೋಲಿಕೆ ಹೊಂದಿವೆ.) ಹೇ ನನ್ನ ಅಲ್ಲಾಹ್ ನೀನು ದಯೆದೋರು.

ಪ್ರವಾದಿತ್ವ ಸ್ಥಾನವನ್ನು ಕಸಿದುಕೊಳ್ಳಲಾಗುವುದು ಮತ್ತು ಅವರಿಗೆ ಪವಿತ್ರ ಖುರ್‌ಆನಿನ ವಚನದಲ್ಲಿ ಸೂಚಿಸಲಾದ ಪ್ರಕಾರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವ ಮೂಲಕ ಹೊಸದಾಗಿ ಪ್ರವಾದಿತ್ವ ಲಭಿಸುವುದು ಎಂದು ಹೇಳುವುದಾದರೆ, ಅಂತಹ ಪರಿಸ್ಥಿತಿಯಲ್ಲಿ ಅತ್ಯುತ್ತಮ ಸಮುದಾಯ ಆಗಿರುವ ಈ ಸಮುದಾಯದ ಒಬ್ಬ ವ್ಯಕ್ತಿ ಆ ಸ್ಥಾನಕ್ಕೆ ಹೆಚ್ಚು ಅರ್ಹನಾಗುತ್ತಾನೆ. ಅದಕ್ಕಾಗಿ ಹಝ್ರತ್ ಈಸಾ ಮಸೀಹರನ್ನು ಆಕಾಶದಿಂದ ಇಳಿಸುವ ಆವಶ್ಯಕತೆ ಇಲ್ಲ. ಏಕೆಂದರೆ ಒಬ್ಬನಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಿಂದ ನುಬುವ್ವತ್ತಿನ ಪ್ರಕಾಶ ಲಭಿಸಲು ಸಾಧ್ಯವಿರುವುದಾದರೆ ಆಕಾಶದಿಂದ ಯಾರನ್ನಾದರೂ ಕೆಳಗೆ ಇಳಿಸುವುದರಿಂದ ಮೂಲ ಹಕ್ಕುದಾರನ ಹಕ್ಕು ಕಸಿದಂತೆ ಆಗುತ್ತದೆ. ಆದರೆ ಈ ಸಮುದಾಯಕ್ಕೆ ಲಭಿಸಬೇಕಾದ ಈ ಅನುಗ್ರಹವನ್ನು ಯಾರಿಂದಲೂ ತಡೆಯಲು ಸಾಧ್ಯವಲ್ಲ. ಹಾಗೇನಾದರೂ ಆದರೆ ಎಲ್ಲ ಅನುಗ್ರಹಗಳ ಮೂಲ ಹಝ್ರತ್ ಪೈಗಂಬರ್[ಸ] ಆಗಿರುವರು ಎಂಬ ಸಂಗತಿ ಸಂಶಯಕರವಾಗುವುದು.

ಮೊದಲೇ ಪ್ರವಾದಿಯಾಗಿರುವ ವ್ಯಕ್ತಿಯನ್ನು ಪ್ರವಾದಿಯನ್ನಾಗಿ ಮಾಡುವುದಕ್ಕೆ ಯಾವುದೇ ಅರ್ಥವಿಲ್ಲ. ಉದಾಹರಣೆಗೆ, ಒಬ್ಬನು ತಾನು ಬಂಗಾರ ಮಾಡುವುದಾಗಿ ವಾದಿಸಿಕೊಂಡು ಬಂಗಾರದ ಮೇಲೆಯೇ ಬೆತ್ತವನ್ನು ಬೀಸಿಕೊಂಡು ಇದೋ ಚಿನ್ನವಾಯಿತು ಎಂದು ಹೇಳಿದರೆ ಅವನನ್ನು ಚಿನ್ನದ ತಯಾರಕ ಎಂದು ಹೇಳಲು ಸಾಧ್ಯವೇ? ಹಝ್ರತ್ ಪೈಗಂಬರನ್ನು[ಸ] ಪೂರ್ಣವಾಗಿ ಅನುಸರಿಸಿದ ಕಾರಣದಿಂದ ಈ ಸಮುದಾಯದ ಒಬ್ಬನಿಗೆ ಪ್ರವಾದಿತ್ವ ಸ್ಥಾನ ಲಭಿಸಿದರೆ ಅದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹದ ಹಿರಿಮೆಯನ್ನು ಸೂಚಿಸುತ್ತದೆ. ಆದರೆ ಮೊದಲೇ ನಬಿಯಾಗಿರುವವನನ್ನು ಈ ಸಮುದಾಯದವನು ಎಂದು ಹೇಳುವುದು ಮತ್ತು ಹಝ್ರತ್ ಪೈಗಂಬರರನ್ನು[ಸ] ಅನುಸರಿಸಿದ ಕಾರಣದಿಂದ ಆತನಿಗೆ ನುಬುವ್ವತಿನ ಪದವಿ ದೊರಕಿತು ಎಂದು ಭಾವಿಸುವುದು ಅತ್ಯಂತ ಸುಳ್ಳು ಮತ್ತು ಪೊಳ್ಳು ವಾದವಾಗಿದೆ. ಈ ಎರಡು ಹೇಳಿಕೆಗಳು ಪರಸ್ಪರ ವಿರುದ್ಧವಾಗಿವೆ. ವಾಸ್ತವದಲ್ಲಿ ಹಝ್ರತ್ ಈಸಾ ಮಸೀಹರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸದೆ ನೇರವಾಗಿ ಪ್ರವಾದಿತ್ವ ದೊರಕಿತ್ತು. **ಇಮಾಮುಕುಮ್ ಮಿನ್‌ಕುಮ್** (ಅರ್ಥ: ನಿಮ್ಮಿಂದಲೇ ನಿಮ್ಮ ಮಾರ್ಗದರ್ಶಕ ಬರುವರು – ಅನುವಾದಕ) ಎಂಬ ಹದೀಸಿನ ಪ್ರಕಾರ ಅವರನ್ನು ಈ ಸಮುದಾಯದ

ವ್ಯಕ್ತಿ ಎಂದು ಹೇಳುವುದಾದರೆ ಅವರಿಗೆ ದೊರಕಿದ ಪ್ರತಿಯೊಂದು ಶ್ರೇಷ್ಠತೆಯು ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದಿಂದ ಲಭಿಸಿತ್ತು ಎಂದಾಗುತ್ತದೆ. ಆದರೆ ಅವರಿಗೆ ಲಭಿಸಿದ ಪ್ರವಾದಿತ್ವ ಪದವಿಯು ಹಝ್ರತ್ ಪೈಗಂಬರರ(ಸ) ದೀಪದಿಂದ ಅಲ್ಲವೆಂದು ನಾವು ಮೊದಲೇ ಸಾಬೀತುಗೊಳಿಸಿದ್ದೇವೆ. ಇಲ್ಲಿ ಎರಡು ವಿರುದ್ಧ ಹೇಳಿಕೆಗಳನ್ನು ಜೊತೆ ಸೇರಿಸಲಾಗಿದೆ. ಇದು ಸ್ಪಷ್ಟವಾಗಿ ಅರ್ಥಹೀನ ಸಿದ್ಧಾಂತವಾಗಿದೆ.

ಹಝ್ರತ್ ಈಸಾರನ್ನು(ಅ) ಈ ಸಮುದಾಯದ ವ್ಯಕ್ತಿ ಎಂದು ಕರೆಯಲಾಗುವುದು, ಆದರೆ ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದಿಂದ ಅವರಿಗೆ ಅನುಗ್ರಹ ಲಭಿಸದು ಎಂದು ಹೇಳುವುದಾದರೆ, ಅವರು **ಉಮ್ಮತೀ** ಆಗಿರುವರು ಎಂಬ ಸಂಗತಿ ಅರ್ಥಹೀನವಾಗುವುದು. ಏಕೆಂದರೆ ಪವಿತ್ರ ಖುರ್‌ಆನಿನಲ್ಲಿ ಹಲವೆಡೆ ಪ್ರಸ್ತಾಪಿಸಲಾದಂತೆ **ಉಮ್ಮತೀ** ಎನ್ನುವುದರ ಅರ್ಥ ತಾನು ಅನುಸರಿಸುವ ಪ್ರವಾದಿಯಿಂದ ಎಲ್ಲ ಅನುಗ್ರಹ ಗಳಿಸಿದವನು ಎಂದಾಗಿದೆ. ಈ ಸಮುದಾಯದ ಜನರಿಗೆ ಹಝ್ರತ್ ಪೈಗಂಬರರಿಂದ(ಸ) ಅನುಗ್ರಹ ಪಡೆಯಲಿಕ್ಕಾಗಿ ಬಾಗಿಲು ತೆರೆದಿಡಲಾಗಿರುವಾಗ ಸ್ವತಃ ರಚಿಸಿದ ವಿಧಾನವನ್ನು ಅನುಸರಿಸುವುದು ಮತ್ತು ಎರಡು ವಿರುದ್ಧ ಹೇಳಿಕೆಗಳನ್ನು ಜೊತೆ ಸೇರಿಸುವುದು ಮೂರ್ಖತನವಾಗಿದೆ. ಒಬ್ಬನಿಗೆ ಲಭಿಸಿದ ಯಾವುದೇ ಶ್ರೇಷ್ಠತೆ ಹಝ್ರತ್ ಪೈಗಂಬರರನ್ನು(ಸ) ಅನುಸರಿಸಿದ ಕಾರಣದಿಂದ ಅಲ್ಲವೆಂದಾದರೆ ಆ ವ್ಯಕ್ತಿ ಉಮ್ಮತೀ ಆಗುವುದಾದರೂ ಹೇಗೆ?

ಈ ವಿವರಣೆಯು ಕೆಲವು ಅವಿವೇಕಿಗಳ ಒಂದು ಆಕ್ಷೇಪಕ್ಕೂ ಉತ್ತರವಾಯಿತು. ದಿವ್ಯವಾಣಿ ಕೇವಲ ದಿವ್ಯವಾಣಿ ಪಡೆಯುವವನ ಮಾತೃಭಾಷೆಯಲ್ಲಿ ಅವತೀರ್ಣ ವಾಗಬೇಕು; ಅದಲ್ಲದೇ ಅರಬಿ ಭಾಷೆಯಲ್ಲಿ ಆಗಿರಬಾರದು ಎಂದು ಅವರು ಹೇಳುತ್ತಾರೆ. ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದಿಂದ ಅನುಗ್ರಹ ಗಳಿಸದೆ ನೇರವಾಗಿ ಪ್ರವಾದಿತ್ವ ಪಡೆಯುವವನಿಗೆ ಮಾತೃಭಾಷೆಯಲ್ಲಿ ದಿವ್ಯವಾಣಿ ಲಭಿಸಬೇಕು ಎಂಬ ತತ್ವ ಅನ್ವಯವಾಗುತ್ತದೆ. ಆದರೆ ಯಾವಾತನು ಹಝ್ರತ್ ಪೈಗಂಬರರನ್ನು(ಅ) ಅನುಸರಿಸಿದ ಕಾರಣದಿಂದ ಅವರ ಪ್ರವಾದಿತ್ವದಿಂದ ಅನುಗ್ರಹ ಗಳಿಸುತ್ತಾನೋ ಆತನಿಗೆ ತಾನು ಅನುಸರಿಸುವ ಪ್ರವಾದಿಯ ಮಾತೃಭಾಷೆಯಲ್ಲಿ ದಿವ್ಯವಾಣಿ ಲಭಿಸುವುದಾದರೆ ಅದು ಅನುಸರಿಸುವವನ ಮತ್ತು ಅನುಸರಿಸಲ್ಪಡುವ ಪ್ರವಾದಿಯ ಪರಸ್ಪರ ಸಂಬಂಧದ ಚಿಹ್ನೆಯಾಗಿದೆ.

ಈ ಜನರು ಹಝ್ರತ್ ಈಸಾರ(ಅ) ವಿರುದ್ಧ ಎಲ್ಲ ರೀತಿಯಲ್ಲಿಯೂ ಅನ್ಯಾಯ

ಮಾಡುತ್ತಾರೆ. ಮೊದಲನೆಯದಾಗಿ, ಅವರು ಶಾಪಕ್ಕೆ ಈಡಾಗಿದ್ದರು ಎಂಬ ಆಕ್ಷೇಪವನ್ನು ಪರಿಹರಿಸದೆ ಅವರನ್ನು ಆಕಾಶಕ್ಕೆ ಏರಿಸುತ್ತಾರೆ. ಇದರಿಂದ ಯಹೂದಿಯರ ಮೂಲ ಆಕ್ಷೇಪ ನೆಲೆ ನಿಂತಿರುತ್ತದೆ. ಎರಡನೆಯದಾಗಿ, ಪವಿತ್ರ ಖುರ್‌ಆನಿನಲ್ಲಿ ಅವರ ಮರಣದ ಬಗ್ಗೆ ಎಲ್ಲಿಯೂ ಪ್ರಸ್ತಾಪವಿಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ಅವರಿಗೆ ದೇವನ ಸ್ಥಾನ ನೀಡಲು ಒಂದು ಕಾರಣವನ್ನು ಉಂಟುಮಾಡಿರುವರು. ಮೂರನೆಯದಾಗಿ, ನಿರಾಶೆಯ ಸ್ಥಿತಿಯಲ್ಲಿ ಅವರನ್ನು ಆಕಾಶಕ್ಕೆ ಎಳೆಯುತ್ತಾರೆ. ಯಾವ ಪ್ರವಾದಿಯ ಹನ್ನೆರಡು ಶಿಷ್ಯರೂ ಈಗ ಭೂಮಿಯಲ್ಲಿ ಇಲ್ಲದಿರುವಾಗ ಮತ್ತು ಅವರ ಪ್ರಚಾರ ಕಾರ್ಯ ಪೂರ್ಣಗೊಳ್ಳದೇ ಇರುವಾಗ ಅವರನ್ನು ಆಕಾಶಕ್ಕೆ ಎಳೆದುಕೊಳ್ಳುವುದು ಅವರನ್ನು ನರಕಕ್ಕೆ ಹಾಕಿದಂತೆ ಆಗಿರುತ್ತದೆ. ಏಕೆಂದರೆ ತನ್ನ ಪ್ರಚಾರ ಕಾರ್ಯವನ್ನು ಪೂರ್ಣಗೊಳಿಸಲು ಅವರ ಆತ್ಮ ಆಶಿಸುತ್ತಿತ್ತು. ಅವರ ಇಚ್ಛೆಗೆ ವಿರುದ್ಧವಾಗಿ ಅವರನ್ನು ಆಕಾಶದಲ್ಲಿ ಕುಳ್ಳಿರಿಸಲಾಗಿದೆ. ನನ್ನ ಬಗ್ಗೆ ಹೇಳುವುದಾದರೆ, ನನ್ನ ಕೆಲಸ ಪೂರ್ಣಗೊಳ್ಳುವುದಕ್ಕೆ ಮುಂಚಿತವಾಗಿ ನನ್ನನ್ನು ಜೀವಂತವಾಗಿ ಏಳನೇ ಆಕಾಶಕ್ಕೆ ಏರಿಸಿದರೂ ಕೂಡ ನಾನು ಸಂತೋಷಪಡಲಾರೆ. ನನ್ನ ಕೆಲಸ ಪೂರ್ಣಗೊಳ್ಳದಿರುವಾಗ ನನಗೆ ಸಂತೋಷ ಲಭಿಸಲು ಹೇಗೆ ತಾನೆ ಸಾಧ್ಯ? ಇದೇ ರೀತಿಯಲ್ಲಿ ಹಝ್ರತ್ ಈಸಾರಿಗೂ(ಅ) ಆಕಾಶಕ್ಕೆ ಹೋದ ಬಗ್ಗೆ ಸಂತೋಷವಿರಲಾರದು. ಆದರೆ ಸತ್ಯದಲ್ಲಿ ಹಝ್ರತ್ ಈಸಾ(ಅ) ರಹಸ್ಯವಾಗಿ ವಲಸೆ ಹೋಗಿದ್ದರು. ಅದನ್ನು ಅವರು ಆಕಾಶಕ್ಕೆ ಹೋದರೆಂದು ಅವಿವೇಕಿಗಳು ಭಾವಿಸಿದರು. ಈ ಜನರಿಗೆ ಅಲ್ಲಾಹನು ಸನ್ಮಾರ್ಗ ದಯಪಾಲಿಸಲಿ.

**ವಸ್ಸಲಾಮು ಅಲಾ ಮನಿತ್ತಬಅಲ್‌ಹುದಾ**

(ಸನ್ಮಾರ್ಗದಲ್ಲಿ ನಡೆಯುವವನ ಮೇಲೆ ಶಾಂತಿ ಇರಲಿ.)

**ಮಿರ್ಝಾ ಗ಼ುಲಾಮ್ ಅಹ್ಮದ್**

27–11–1902